ಶ್ರೀ ಅರಗ ಜ್ಞಾನೇಂದ್ರ : ಇಡೀ ಮಲೆನಾಡು ಭಾಗ ಮುಳುಗಿ ಹೋಗಿದೆ. ದಯಮಾಡಿ ನಮಗೆ ಅವಕಾಶಮಾಡಿಕೊಡಬೇಕು.

(ಗೊಂದಲ)

ಶ್ರೀ ಕುಮಾರ್‌ಬಂಗಾರಪ್ಪ: ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ನಾನು ನಿಮಗೆ ಅವಕಾಶ ಮಾಡಿಕೊಡುತ್ತೇನೆ. ಈಗ ನೀವು ಕುಳಿತುಕೊಳ್ಳಿ. ಮಳೆಯಿಂದ ಆಗಿರುವ ಅನಾಹುತದ ಬಗ್ಗೆ ಬಹಳ ಜನ ಮಾತನಾಡಬೇಕೆಂದಿದ್ದಾರೆ. ನಾನು ಅವಕಾಶ ಕೊಡುತ್ತೇನೆ, ನೀವು ಕುಳಿತುಕೊಳ್ಳಿ.

ಶ್ರೀ ಕೆ.ಜಯಪ್ರಕಾಶ ಹೆಗ್ಡೆ: ಮೊದಲು ನೆರೆ ಹಾವಳಿ ಚರ್ಚೆಯಾಗಲಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ಆಮೇಲೆ ಅದು. ಮೊದಲು ಚುನಾವಣೆ ಬಗ್ಗೆ ಚರ್ಚೆಯಾಗಲಿ. ಅಧ್ಯಕ್ಷರೇ ನಾನು ಈಗ ಮಾತನಾಡಲೇ?

ಅಧ್ಯಕ್ಷರು: ನೀವು ಮಾತನಾಡಿ. ಬೇರೆಯವರಿಗೆ ನಾನು ಅವಕಾಶ ಕೊಡುತ್ತೇನೆ, ಕುಳಿತುಕೊಳ್ಳಿ.

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

(1) ವಿಷಯ: ಪುರಸಭೆ ಚುನಾವಣೆ ಘೋಷಣೆ ಕುರಿತು.

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ): ಸನ್ಮಾನ್ಯ ಅಧ್ಯಕ್ಷರೇ, ಅಪರೂಪವಾಗಿ ಈಗ ನಮ್ಮ ಕರ್ನಾಟಕದಲ್ಲಿ ಜಡಿಮಳೆ ಆರಂಭವಾಗಿಬಿಟ್ಟಿದೆ. ಇದೇ ಸಮಯಕ್ಕೆ ಸರ್ಕಾರದವರು ಏಕಾಏಕಿ ಪುರಸಭೆ ಚುನಾವಣೆಗಳನ್ನು ಘೋಷಣೆ ಮಾಡಿದ್ದಾರೆ. ನಾವು ಚುನಾವಣೆಗಳಿಗೆ ಯಾವತ್ತೂ ವಿರೋಧಿಗಳಲ್ಲ. ಚುನಾವಣೆ ಆಗಲೇಬೇಕು. ಅದಕ್ಕೋಸ್ಕರ ಸಂವಿಧಾನಕ್ಕೆ 73 ಅಮೆಂಡ್‌ಮೆಂಟ್ ಆಗಿ ಚುನಾವಣೆಗಳನ್ನು ನಡೆಸಲಿಕ್ಕೆ ಕಮೀಷನರ್‌ಗೆ ಅಧಿಕಾರವನ್ನು ಕೊಟ್ಟಿರುವುದನ್ನು ಒಪ್ಪಿರುವವರು ನಾವು. ಆದರೂ ಕೂಡ ಸರ್ಕಾರ ಮತ್ತು ಕಮೀಷನರರು ಒಟ್ಟಿಗೆ ಕುಳಿತು ಚುನಾವಣೆಗಳನ್ನು ಯಾವ ಕಾಲದಲ್ಲಿ ಮಾಡಬೇಕು, ಹೇಗೆ ಮಾಡಬೇಕು ಎನ್ನುವ ಬಗ್ಗೆ ನಿರ್ಧಾರಗಳನ್ನು

ತೆಗೆದುಕೊಳ್ಳಬೇಕಾಗಿತ್ತು. ಈ ಚುನಾವಣೆಯನ್ನು ನಡೆಸುವುದು ಒಂದು ಕಡೆ ಪ್ರೆಸ್ಟೀಜ್ ಆಗಿದೆ. ಇನ್ನೊಂದು ಕಡೆ ಯಾರಿಗೋ ಅಸಹಾಯಕತೆ ಎಂದು ಪ್ರತಿಬಿಂಬಿತವಾಗುತ್ತಿದೆ. ಇದೆರಡನ್ನು ಬಿಟ್ಟು ಆಚೆ ಇರುವ ನಮಗೆ, ಏನು ನಡೆಯುತ್ತಿದೆ ಎಂದು ಅರ್ಥವಾಗುತ್ತಿಲ್ಲ. ಚುನಾವಣೆ ಏಪ್ರಿಲ್, ಮೇ ನಲ್ಲಿ ನಡೆದಿದ್ದರೆ ಅದಕ್ಕೆ ನಮ್ಮದೇನು ತಕರಾರು ಇರಲಿಲ್ಲ. ಅಗಸ್ಟ್, ಸೆಪ್ಟಂಬರ್‌ಗಳಲ್ಲಿ ಒಂದೇ ಸಮನೆ ಮಳೆ ಬೀಳುತ್ತಿರುತ್ತದೆ. ಕೃಷಿ ಚಟುವಟಿಕೆಗಳು ಒಂದೇ ಸಮನೆ ನಡೆಯುವಂಥ ಕಾಲವಿದು. ಸಂಜೆಯಾದರೆ ಮನೆ ಸೇರಿಕೊಂಡರೆ ಸಾಕು ಎನ್ನುವ ಸ್ಥಿತಿಯಲ್ಲಿರುವಾಗ ಚುನಾವಣೆಯನ್ನು ಯಾರು ಮಾಡಬೇಕು, ಹೇಗೆ ಮಾಡಬೇಕು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ನಾನು ನಿನ್ನೆ ಶಿವಮೊಗ್ಗದಲ್ಲಿದ್ದೆ. ಅಲ್ಲಿ ಮೂರು ದಿವಸಗಳಿಂದ ಮಳೆಯೇ ಬಿಟ್ಟಿಲ್ಲ. ಅಲ್ಲಿಂದ ಆಚೆ ಬಂದರೆ, ಮಳೆಯನ್ನೇ ನೋಡದಂಥ ನಮ್ಮ ಕ್ಷೇತ್ರಗಳಲ್ಲೂ ಕೂಡ ಎರಡು ದಿವಸಗಳಿಂದ ಒಂದೇ ಸಮನೆ ಜಡಿಮಳೆ ಬೀಳುತ್ತಿದೆ. ನಮ್ಮ ಕಡೆ ಭಾರಿ ಮಳೆ ಆಗದಿದ್ದರೂ, ಆಚೆ ಬರಲಾರದಂಥ ಸ್ಥಿತಿ ನಿರ್ಮಾಣವಾಗಿದೆ. ಇಂಥ ಸ್ಥಿತಿಯಲ್ಲೇ ಏಕೆ ಚುನಾವಣೆಯಾಗಬೇಕು ಎನ್ನುವುದಕ್ಕೆ ಸರ್ಕಾರದವರು ನಮಗೆ ಉತ್ತರ ಹೇಳಬೇಕು. ಚುನಾವಣಾ ಆಯೋಗದವರು ನಿಮ್ಮನ್ನು consult ಮಾಡಿದರೇ, ಮಾಡಲಿಲ್ಲವೇ? ಮಳೆಯಿಂದ ಆಗಿರುವ ನಷ್ಟವನ್ನು ಮೊದಲು ಸರಿಪಡಿಸುತ್ತೀರಾ? ರಸ್ತೆಗಳನ್ನು ಮಾಡುತ್ತೀರಾ? ಬಿದ್ದುಹೋಗಿರುವ ಮನೆಗಳನ್ನು ಕಟ್ಟುತ್ತೀರಾ? ಆಮೇಲೆ ಚುನಾವಣೆಗೆ ಹೋಗುತ್ತೀರಾ ಎನ್ನುವುದನ್ನು ಹೇಳಬೇಕು. ನಾವು ಚುನಾವಣೆಗೆ ಹೋದಾಗ ಜನಗಳು ಈ issue ವನ್ನೇ ಇಟ್ಟುಕೊಂಡು ಚರ್ಚೆ ಮಾಡಲಿಕ್ಕೆ ಈಗ ಚುನಾವಣೆಯನ್ನು ಮಾಡುತ್ತಿದ್ದೀರಾ? ನಾವು ಈಗ ಚುನಾವಣೆಗೆ ಹೋದರೆ ಬೇರೆ ಏನೂ ಚರ್ಚೆಯಾಗುವುದಿಲ್ಲ. ನಿಮಗೆ ಕಣ್ಣಿಲ್ಲವೇನ್ರೀ, ರೋಡ್ ನೋಡಿ ಹೇಗಾಗಿದೆ, ಮನೆ ನೋಡಿ ಹೇಗಾಗಿದೆ ಎಂದು ಕೇಳುವಂಥ ಸ್ಥಿತಿ ನಿರ್ಮಾಣವಾದಾಗ, ನಮ್ಮನ್ನು ಆ ಜನಗಳ ಮುಂದೆ ನಿಲ್ಲಿಸಿ ತಮಾಷೆ ನೋಡುವ ಸ್ಥಿತಿ ನಮಗೆ ಏಕೆ ಬಂತು ಎಂದು ನಮಗೆ ಹೇಳಬೇಕು. ನಮಗೆ ಚುನಾವಣೆಗಳು ನಡೆಯಬಾರದು ಎಂದೇನೂ ಇಲ್ಲ. ಎರಡನೆಯದಾಗಿ, Reservation ಗೆ ನನ್ನದು ಮೂಲಭೂತ ತಕರಾರು ಇದೆ. ನಾವೆಲ್ಲ ಕೋರ್ಟ್ ಮುಂದೆ ತಕರಾರು ಹಾಕಿದ್ದೇವೆ. Deputy

Commissioner ಗಳು ಮನವಿ ತೆಗೆದುಕೊಂಡಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ನಾವು ಹಾಕಿರುವ ತಕರಾರಿನ ಬಗ್ಗೆ ಇವತ್ತಿನವರಗೆ hearing ಮಾಡಿಲ್ಲ. Reservation ಅನ್ನು Fix ಮಾಡಬೇಕಾಗಿರುವುದು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿದ್ದುದರಿಂದ, ನೀವು ಹೈಕೋರ್ಟ್ ಮುಂದೆ ಹೇಳಿಕೆ ಕೊಟ್ಟು ಹೋದವರು, notification ಮಾಡಿ, objection call ಮಾಡಿದಂಥ Deputy Commissioners ಇವತ್ತಿನವರೆಗೆ ಯಾವುದನ್ನು hear ಮಾಡಿಲ್ಲ. ನನ್ನ ಕ್ಷೇತ್ರದಲ್ಲಿ ನಾನೇ 2–3 ಕೇಸನ್ನು ಹಾಕಿಸಿದ್ದೇನೆ. ಕುರುಬರಹಳ್ಳಿ ಎನ್ನುವ ಹೆಸರಿನ ಒಂದು ಊರು ಇದೆ. ನಾನು ಜಾತಿ ಮಾತನಾಡಲಿಕ್ಕೆ ಇಷ್ಟ ಪಡುವುದಿಲ್ಲ. ಪೂಜೆ ಮಾಡುವಂತವರು, ವಿರಶೈವರ ಒಂದೇ ಒಂದು ಮನೆ ಅಲ್ಲಿದ್ದರೆ, ಅದನ್ನು B.C.M- B ಗೆ reserve ಮಾಡಿ, ನನಗೆ ಇವತ್ತು ಆಪಾದನೆ ಬರುವ ಸ್ಥಿತಿಯನ್ನು ನಿರ್ಮಾಣ ಮಾಡಿದ್ದಾರೆ. ಒಂದು ಊರಿನಲ್ಲಿ ಇಡೀ ಒಂದು ಜನಾಂಗದವರಿದ್ದರೆ, ಇವರು ಅದಕ್ಕೆ ವಿರುದ್ಧವಾಗಿ reservation ಮಾಡುತ್ತಾರೆ. ಒಂದು ವಾರ್ಡ್ ಇದ್ದುದನ್ನು, ವಾರ್ಡ್ 1,2,3, ಎಂದು populationಗೆ ಅನುಗುಣವಾಗಿ bifurcate ಮಾಡಿಸಿದರು. ಒಂದೇ ವಾರ್ಡ್ ಇದ್ದಾಗ ಅಲ್ಲಿ ಸುಮಾರು ಎರಡು ಸಾವಿರ ಜನರಿದ್ದಾಗ, ಅದರಲ್ಲಿ 587 ಜನ scheduled caste ನವರಿದ್ದರೆ, ಇವತ್ತು ಅಷ್ಟು ಜನ scheduled caste ನವರು ಒಂದೇ ವಾರ್ಡ್‌ನಲ್ಲಿದ್ದಾರೆ ಎಂದು record ಮಾಡಿ, ಮೂರನೇ ಸಲ ಸತತವಾಗಿ ಆ ವಾರ್ಡ್‌ನ್ನು scheduled casteಗೆ reserve ಮಾಡಿದ್ದಾರೆ. ಅದನ್ನೆ ನಾವು ಕೇಳುತ್ತಿದ್ದೇವೆ. ಹೇಗೆ ಮಾಡುವುದಕ್ಕೆ ಬರುತ್ತದೆ ಎಂದು ನಾವು D.C. ಮುಂದೆ objection ಹಾಕಿದ್ದೇವೆ. ನಾವು ದಾಖಲೆ ಸಹ ಕೊಟ್ಟಿದ್ದೇವೆ. ವಾರ್ಡ್ ನಂಬರ್ 2ರಲ್ಲಿ 1,084 ಜನರಲ್ಲಿ 145 ಜನ scheduled caste ಇದ್ದಾರೆ ಎಂದು ನಾವು ವಾದ ಮಾಡಿದರೆ, ಅವರು 587 ಜನ ಇದ್ದಾರೆ ಎಂದು ದಾಖಲೆ ಕೊಡುತ್ತಾರೆ. ಇದು ವಾರ್ಡ್ 1 ಮತ್ತು 2, ಇವರೆಡು ಒಟ್ಟಿಗೆ ಇದ್ದಾಗ ಇದ್ದಂಥ S.C. population ಅನ್ನು ಇವರು, ಇವರ ಅನುಕೂಲಕ್ಕಾಗಿ ವಾರ್ಡ್ 2ಕ್ಕೆ shift ಮಾಡಿಕೊಂಡು ಬಿಡುತ್ತಾರೆ. ಅಲ್ಲಿರುವುದು ಬರೀ ನೂರು ಚಿಲ್ಲರೆ scheduled caste population. ಮೂರನೇ ಸಲ ಸತತವಾಗಿ ಅಲ್ಲಿ scheduled caste ಇಡುತ್ತಿದ್ದಿರಿ. ಅದನ್ನು ಇನ್ನೊಂದು ವಾರ್ಡ್‌ಗೆ shift ಮಾಡಿಕೊಡಿ ಎಂದು

ಕೇಳುತ್ತಿದ್ದೇವೆ. scheduled caste ನವರಿಗೆ ಅವರ ಜನಸಂಖ್ಯೆಗನುಗುಣವಾಗಿ reservation ಕೊಡಬೇಡಿ ಎಂದು ನಾವೇನು ಕೇಳಿಲ್ಲ. ಒಂದೇ ward ಅನ್ನು ಏಕೆ reserve ಮಾಡುತ್ತಿದ್ದೀರೆಂದು ಕೇಳಿದರೆ ಇವತ್ತಿನವರೆಗೆ ನಮಗ್ಯಾರೂ ಉತ್ತರ ಹೇಳಲಿಲ್ಲಿ. D.C. ಯವರು ಕರೆಯುತ್ತಾರೆ, ನಮ್ಮ ತಕರಾರನ್ನೆಲ್ಲ ತೆಗೆದುಕೊಳ್ಳುತ್ತಾರೆ, ಎಲ್ಲಾ ಸರಿ ಮಾಡುತ್ತಾರೆ. ನಂತರ ಚುನಾವಣೆಗಳು ಘೋಷಣೆ ಆಗುತ್ತದೆಂದು ಕಾಯುತ್ತಿದ್ದರೆ, ಮೊನ್ನೆ ಏಕಾಏಕಿ ಪತ್ರಿಕೆಯಲ್ಲಿ ಬಂದಿದೆ, ಅದೇನು ಸರಿಯೋ ತಪ್ಪೋ ನನಗೆ ಗೊತ್ತಿಲ್ಲ. ಇಲ್ಲಿ Assembly ನಡೆಯುತ್ತಿದೆ, ಸರ್ಕಾರದವರು ಇಲ್ಲಿ ಕುಳಿತಿದ್ದಾರೆ, ಕನಿಷ್ಠ ಸೌಜನ್ಯಕ್ಕಾದರೂ ರಾಜ್ಯ ಸರ್ಕಾರದವರು ಹೀಗೆ election ಅನ್ನು declare ಮಾಡುತ್ತಿದ್ದೇವೆ ಎಂದು ಶಾಸನ ಸಭೆ ಅಧಿವೇಶನದಲ್ಲಿದ್ದಾಗ ಹೇಳಬಾರದೆ? ಯಾರು declare ಮಾಡಿದರು, ಏಕೆ declare ಮಾಡಿದರು ಎನ್ನುವುದು ಗೊತ್ತಿಲ್ಲ. Without consultation of the Government Local elections ಆಗುವುದಕ್ಕೆ ಸಾಧ್ಯವೇ ಇಲ್ಲ. ಸರ್ಕಾರದಿಂದ ನೀವು police force ಕೊಡಬೇಕು, Officers force ಕೊಡಬೇಕು, ಎಲ್ಲಾ ಪ್ರಕ್ರಿಯೆಗಳನ್ನು ನಿಲ್ಲಿಸಬೇಕು. ಇನ್ನು Code of conduct ಅನ್ನು ತರಿಸಿಕೊಂಡು ತಾವು ಓದಬೇಕು. ಆ ಕ್ಷಣದಿಂದಲೇ ಜಾರಿಗೆ ಬರುತ್ತದೆ ಎಂದು ಇದೆ. ಕಾಮಗಾರಿಗಳನ್ನು ಮಾಡಿಸುವ ಕುರಿತಂತೆ tender ಪ್ರಕ್ರಿಯೆಲ್ಲಿರುವುದನ್ನು ಏನು ಮಾಡಬೇಕು, tender ಆಗಿ work ಪ್ರಾರಂಭಮಾಡಬೇಕಾಗಿರುವುದು ಏನು ಮಾಡಬೇಕು? ನಮಗೆ ಅರ್ಥವೇ ಆಗುತ್ತಿಲ್ಲ. ಪುಣ್ಯಕ್ಕೆ, SFC grant ಅನ್ನು Minicipality ಗೆ 2–2 ಕೋಟಿ ರೂಪಾಯಿಗಳನ್ನು 15 ದಿವಸಗಳ ಹಿಂದೆ Minister ರವರು ಆದೇಶ ಮಾಡಿ ಹಣ ಕೊಟ್ಟಿದ್ದಾರೆ. ನಾವು ಇನ್ನೆನೂ ಕೆಲಸ ಪ್ರಾರಂಭ ಮಾಡಬೇಕೆಂದುಕೊಳ್ಳುವಾಗ, ದಿಢೀರೆಂದು Code of conduct ಅನ್ನು apply ಮಾಡಿ, ಯಾವುದೇ ಕಾಮಗಾರಿ ಆಗಬಾರದು ಎಂದು ಹೇಳುತ್ತಿದ್ದಾರೆ. ನಾವು ಇವತ್ತು ಕೆಲಸವನ್ನು ನಿಲ್ಲಿಸಿಬಿಟ್ಟರೆ, ಅವರು ಮಾಡಬಾರದು, ನಾವು ಮಾಡಬೇಕೆಂದಲ್ಲ, ಸರ್ಕಾರದವರು ಕಾಮಗಾರಿ ಮಾಡಬೇಕೆಂದೇನು ಹೊರಟಿದ್ದೀರಿ, ನಿಮ್ಮ ಕಾಲದಲ್ಲಿ ಆಗಲೇ ಇಲ್ಲ ಹೊಸ Municipality ಬಂದ ಮೇಲೆ ಆಯಿತು ಎನ್ನುವ ಸ್ಥಿತಿ ನಿರ್ಮಾಣ ಮಾಡುವುದೊಂದು ಕಡೆಯಾದರೆ, ಇನ್ನು ಎರಡು ತಿಂಗಳು declaration ಎಲ್ಲ ಮುಗಿದು, ಇನ್ನು

ಎರಡು ತಿಂಗಳ ಕಾಲ ನಾವು ಕಾಮಗಾರಿಯನ್ನು ಆರಂಭ ಮಾಡಲಿಕ್ಕೆ ಸಾಧ್ಯವೇ ಇಲ್ಲ. ರಾಜಕೀಯ, elections ನಲ್ಲಿ ಇವತ್ತಾದರೂ ಗೆಲ್ಲುವವರು ಗೆಲ್ಲುತ್ತಾರೆ, ಸೋಲುವವರು ಸೋಲುತ್ತಾರೆ. ಇನ್ನು ಎರಡು ತಿಂಗಳು ಬಿಟ್ಟು election ನಡೆಸಿದರೆ, ಆಗಲೂ ಸಹ ಗೆಲ್ಲುವವರು ಗೆಲ್ಲುತ್ತಾರೆ, ಸೋಲುವವರು ಸೋಲುತ್ತಾರೆ. ಇದರಲ್ಲೇನೂ ಬಹಳ ಪ್ರಾಮುಖ್ಯವಾದ ಸ್ಥಿತಿ ನಿರ್ಮಾಣವಾಗುತ್ತದೆ ಎನ್ನುವುದು ಗೊತ್ತಿಲ್ಲ. ನಾವು ಒಂದು ಅಧಿಕಾರ ಮಾಡಲಿಕ್ಕೆ, ಒಂದು ಪ್ರಜಾಪ್ರಭುತ್ವ ವ್ಯವಸ್ಥೆ ಇಡಲಿಕ್ಕೆ, ಆ ವ್ಯವಸ್ಥೆ ನಮ್ಮ ಪ್ರತಿನಿಧಿಗಳಿಂದ ಅಥವಾ ಆಯ್ಕೆಯಾದ ಸದಸ್ಯರಿಂದ ನಡೆಯಲಿ ಎನ್ನುವುದಕ್ಕೆ ಇದನ್ನೆಲ್ಲ ಏನು ನಿರ್ಮಾಣ ಮಾಡಿಕೊಂಡಿದ್ದೇವೆ, ಇದರಲ್ಲಿ ಒಂದು ತಿಂಗಳು, ಎರಡು ತಿಂಗಳು ಮುಂದಕ್ಕೆ ಹೋದರೆ, ಭಾರೀ ಪ್ರಮಾದವಾಗುತ್ತದೆಂದು ಸರ್ಕಾರ ಭಾವಿಸಿರುವುದು ತಪ್ಪು. ಇದು ಕೇವಲ ಕಾನೂನು ಸಮರವಾಗಬಾರದು ಅಥವಾ ಯಾರದೋ Prestige ಆಗಬಾರದು, High Court ಮುಂದೆ ಕೇಸ್ ಇದೆ Prestige, Commissioner Prestige ಅಥವಾ ಸರ್ಕಾರದ Prestige, ನಾವು ವಿರೋಧ ಪಕ್ಷವೆಂದು–ಸುಮ್ಮನೆ ನಮಗೋಸ್ಕರ ನಿಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಹಾಕಿಸಿಬೇಕೆಂದು ನಾವೂ ಮಾತನಾಡುವುದು, election ಮಾಡಿ ಎಂದು ಹೇಳುವುದು; ಒಳಗೊಳಗೆ ನಮ್ಮ ಸ್ಥಿತಿಯನ್ನು ಮುಚ್ಚಿಟ್ಟುಕೊಂಡು ಮಾಡಿ ಎನ್ನುವ ಸ್ಥಿತಿ ಆಗಬಾರದು. ಸರ್ಕಾರ ದಯಮಾಡಿ, ಪುನರ್ ಪರಶೀಲನೆ ಮಾಡಬೇಕು. ತಾವೇನು reservation ಅನ್ನು fix ಮಾಡಿದ್ದೀರಿ, objections call ಮಾಡಿದ್ದರ ಮೇಲೆ ಕನಿಷ್ಠ hear ಮಾಡುವ ಸೌಜನ್ಯ ತೋರಿಸಬೇಕು. ನೀವೇನು ತೀರ್ಮಾನ ಮಾಡುತ್ತೀರೋ? ಬಿಡುತ್ತೀರೋ? ನಾವೊಂದು objection file ಮಾಡಿದ ಮೇಲೆ ನಿಮ್ಮ D.Cಗಳು hear ಮಾಡಿಲ್ಲವೆಂದರೆ ಹೇಗೆ? ಒಂದೇ ಒಂದು ಕಡೆ ಕೂಡ ನಮ್ಮ objections ಅನ್ನು hear ಮಾಡಲಿಲ್ಲ. ಒಂದು, hear ಮಾಡಬೇಕು, ಅದರ ಮೇಲೊಂದು ತೀರ್ಮಾನ ಪ್ರಕಟಣೆ ಮಾಡಬೇಕು. ಆನಂತರ, ನಾವು ಮಾಡುವ ಕೆಲಸವೆಲ್ಲ ಸಮರ್ಪಕವಾಗಿ reservation ಅನ್ನು ಮಾಡಿದ್ದೇವೆಂದು ಹೇಳಬೇಕಾಗಿದೆ. ಸರ್ಕಾರದವರೇನು reservation ಮಾಡಿದ್ದೀರಿ, ಬಹುಶಃ ನಿಮಗೆ ಮಾಹಿತಿಯಲ್ಲಿ ಕೊರತೆಯೋ? ನಿಮಗೆ ಯಾರಾದರೂ ಕಾರ್ಯಕರ್ತರು ಹೇಳುತ್ತಾರೆಯೋ? ನಿಮಗಿಷ್ಟ ಬಂದ ರೀತಿಯಲ್ಲಿ reservations ಮಾಡಿದ್ದೀರಿ. ಯಾರ್ಯಾರನ್ನೋ,

ಎಲ್ಲೆಲ್ಲಿ ಗೆಲ್ಲಿಸಬೇಕೆನ್ನುವ ಸ್ಥಿತಿ ಇಟ್ಟುಕೊಂಡು reservation ಗಳನ್ನು ಮಾಡಿದ್ದೀರಿ. High Court ನಲ್ಲಿ ಇದರ ಬಗ್ಗೆ ಕೂಡ ನಿಮಗೆ ಛೀಮಾರಿ ಹಾಕಿದ್ದಾರೆ. ಆದರೂ ಕೂಡ ಇದು ಸರಿಯಾಗಲಿಲ್ಲ. Reservation ಸರಿಮಾಡಿಕೊಂಡು ಬನ್ನಿ, notify ಮಾಡಿ ಎಂದೇನು High Court ಉದ್ದೇಶವೇನತ್ತು, ಅದು ಸಫಲವಾಗಲಿಲ್ಲ. ದಯಮಾಡಿ, ಈ ಮಳೆಗಾಲ ನಿಲ್ಲುವವರೆಗೆ ಈ reservation ಅನ್ನು ಸರಿಪಡಿಸಿಕೊಂಡು, ಮಳೆಗಾಲ ನಿಂತ ಮೇಲೆ ಈ ಚುನಾವಣೆಗಳಿಗೆ ಕೈಹಾಕಬೇಕು. ನಾವು ಇವತ್ತು ಬಹಳ ಕಷ್ಟದ ಸ್ಥಿತಿಯಲ್ಲಿದ್ದೇವೆ. ಹೋಗುವುದಕ್ಕೆ ನಾವು ತಯಾರಾಗಿಲ್ಲ. ಹೋಗುವುದಕ್ಕೇ ಸಾಧ್ಯವಿಲ್ಲದಂಥ ಮಳೆಗಾಲ ಇದೆ. 15 ದಿವಸಗಳೊಳಗೆ ಚುನಾವಣೆಗಳು ಬಿರುಸಾಗುತ್ತದೆ. ಮಳೆ ಸ್ಥತಿ ಏನಾಗುತ್ತದೆಯೋ ನಮಗೆ ಗೊತ್ತಿಲ್ಲ. ಶಿವಮೊಗ್ಗ ಜಿಲ್ಲೆಯಲ್ಲಂತೂ ಎಲ್ಲಾ ನದಿಗಳೂ ತುಂಬಿ ಹರಿಯುತ್ತಿವೆ. ನಾವು ನಿನ್ನೆ ನೋಡಿದರೆ, ಇಲ್ಲಿ ಇಷ್ಟೊಂದು ನೀರು ಹರಿಯುತ್ತದೆಯೇ ಎಂದು ಆಶ್ಚರ್ಯವಾಯಿತು. ಹೀಗಾಗಿ, ನಮಗೆ ತೊಂದರೆಯಾಗುತ್ತಿದೆ. ಎರಡನೆಯದಾಗಿ, ಜನಸಂಖ್ಯೆ ಕೂಡ ಇವತ್ತು ಏರಿಳಿತಗಳಾಗುತ್ತಿವೆ. ಸ್ವಲ್ಪ ನೀವು fresh voter list ಗೆ ಇನ್ನೊಂದು ಅವಕಾಶ ಕೊಡಬೇಕಾಗುತ್ತದೆ. Voter list ನಿಂದ ಅನೇಕ ಜನರ ಹೆಸರುಗಳು ಕೈಬಿಟ್ಟು ಹೋಗಿದೆ ಎಂದು ಹೇಳಿ ನಾವು ತಕರಾರು ಸಲಿಸಿದ್ದೇವೆ. ಇದನ್ನೆಲ್ಲ ತಾವು ಪುನರ್ ಪರಿಶೀಲನೆ ಮಾಡಬೇಕು. ಸಂವಿಧಾನದತ್ತವಾದ ಅಧಿಕಾರ Commissioner ರವರಿಗೆ ಇದೆಯೆಂದು ನಾವು ಇಲ್ಲಿ ಹೇಳುವುದಕ್ಕಾಗುವುದಿಲ್ಲ. It is an act through the state Government. ನಿಮ್ಮ ಜೊತೆ ಅವರು ಕುಳಿತು ಚರ್ಚೆ ಮಾಡಿ, ನೀವು ಮತ್ತು ಅವರು ಸಹಮತಕ್ಕೆ ಬಂದು ಚುನಾವಣೆಗಳನ್ನು ನಡೆಸುವುದು ಮೊದಲಿನಿಂದ ನಡೆದುಕೊಂಡು ಬಂದಿರುವ ಸಂಪ್ರದಾಯವಾಗಿದೆ. ಈಗಲೂ ಸಹ ಹಾಗೆಯೇ ಕುಳಿತು ತಾವು ಈ ಚುನಾವಣೆಯನ್ನು ಮುಂದಕ್ಕೆ ಹಾಕಿ, ಮಳೆಗಾಲ ಕಡಿಮೆಯಾದ ನಂತರ ಈ ಚುನಾವಣೆಗಳನ್ನು ನಡೆಸುವುದು ಒಳ್ಳೆಯದು.

ಅಧ್ಯಕ್ಷರು: ಯಾರಿಗೆ ಅಧಿಕಾರವಿಲ್ಲವೋ ಅವರಿಗೆ ಮುಂದಕ್ಕೆ ಹಾಕಿ ಎಂದು ಹೇಳುತ್ತಿದ್ದೀರಾ? ಚುನಾವಣೆ ಮುಂದಕ್ಕೆ ಹಾಕುವುದಕ್ಕೆ ಸರ್ಕಾರಕ್ಕೆ ಏನು ಅಧಿಕಾರವಿದೆ?

ಶ್ರೀ ಜೆ.ಸಿ.ಮಾಧುಸ್ವಾಮಿ: ಸರ್ಕಾರಕ್ಕೆ ಅಧಿಕಾರವಿದೆ. ಈ ಸರ್ಕಾರವೇ 243 ಅನ್ನು ಇಲ್ಲಿ ಮಾಡಬೇಕೆಂದು Constitution ನಲ್ಲಿ ಹೇಳಿರುವುದು. ಇವರೇ ಮಾಡಬೇಕಾಗಿರುವುದು. ಇವರು ಏತಕ್ಕೆ election ಗೆ ಹೇಳುತ್ತಾರೋ ಗೊತ್ತಿಲ್ಲ.

"Election of the Municipalities- The Superintendence, direction and control for the preparation of electoral roll for, and conduct of all elections to the Municipalities shall be vested in a state Election Commission referred to in Article 243(k)."

243(k) ಜಿಲ್ಲಾ ಪಂಚಾಯತ್‌ಗೆ, ಗ್ರಾಮ ಪಂಚಾಯತ್‌ಗೆ ಎಂದು ಮಾಡಿಕೊಂಡಿದ್ದರಲ್ಲಿ ಎಲ್ಲೂ absolute power ಅನ್ನು ಅವರಿಗೆ ಕೊಟ್ಟಿಲ್ಲ ಅದೇಕೋ ನಾವು ತಪ್ಪಾಗಿ ತಿಳಿದುಕೊಂಡು ಬಿಟ್ಟಿದ್ದೇವೆಂದು ನನ್ನ ಅಭಿಪ್ರಾಯವಾಗಿದೆ. 243K ಯಲ್ಲಿ ಏನು power ಕೊಟ್ಟಿದ್ದೀರಿ? ನೀವು ಜಿಲ್ಲಾಪಂಚಾಯತ್‌ನಲ್ಲಿ ಕೊಟ್ಟಿದ್ದ ಹಾಗೆ ನಾನು ಇಲ್ಲಿ ಓದಿ ಹೇಳುತ್ತೇನೆ.

"The Superintedence, direction and control of the preparation of electoral roll for, and conduct of all elections to the panchayats shall be vested in a state Election Commission consisting of a State Election Commissioner to be appointed by the Governor.

(2) Subject to the provisions of any law made by the Legislature of a state,..." ಅದು ಅವರದು. ಅವರನ್ನು ಬಿಟ್ಟುಬಿಡಿ ಸರ್. ಇಲ್ಲಿ ಎಲ್ಲೂ he is having absolute power ಎಂದು ನೀವು ಹೇಳಿಲ್ಲ. Local Bodies Election ನಲ್ಲಿ supervise, control, regulate ಮಾಡಿ ಎಂದು ಹೇಳಿರುವುದು ಬಿಟ್ಟರೆ, he cannot take law into his hands and declare elections without consultation of the Government. Police force ಅನ್ನು ಒದಗಿಸಬೇಕಾಗಿರುವವರು ನೀವು, ಶಾಲೆಗಳಿಗೆ ರಜೆ ಕೊಡಬೇಕಾಗಿರುವವರು ನೀವು, ಶಾಲೆಗಳನ್ನು ನಡೆಸಬೇಕಾಗಿರುವವರು

ನೀವು ಅಲ್ಲಿ ಎಲ್ಲ election officers ಅನ್ನು appoint ಮಾಡಬೇಕಾಗಿರುವವರು ನೀವು, ತಕರಾರುಗಳನ್ನು hear ಮಾಡಬೇಕಾಗಿರುವವರು ನೀವು, ಇದೆಲ್ಲದಕ್ಕೂ ನೀವು ಸಹಕಾರ ಕೊಟ್ಟು ಒಂದು ದಿನ ನಿಗದಿ ಮಾಡಿದರೆ ನಿಮಗೆ ಮತ್ತು ಅವರಿಗೆ ಅನುಕೂಲ ಆಗುವ ದಿನದಲ್ಲಿ election ಆಗುವುದು ಬಿಟ್ಟರೆ, ಇಲ್ಲಿ ಯಾರದೋ monopoly ಅಥವಾ absolute power ಅನ್ನು Costitution ನಲ್ಲಿ ಕೊಟ್ಟಿದ್ದೇವೆ ಎಂದು ಅರ್ಥೈಸುವುದು ತಪ್ಪಾಗುತ್ತದೆಂದು ಹೇಳುತ್ತಾ, ಸನ್ಮಾನ್ಯ ಕಾನೂನು ಸಚಿವರಿಗೆ ಗೊತ್ತಿದೆ. Local bodies Constitution ಕೆಳಗೆ ನಾವು create ಮಾಡಿರುವ ಸಂಸ್ಥೆಗಳು. ಇದನ್ನೇನೂ ಹೀಗೇ ಆಗಬೇಕೆಂದು ಹೇಳುವುದಾದರೆ, ಹಾಗಾದರೆ ಒಂದು ವರ್ಷದಿಂದ ಮುಂದಕ್ಕೆ ಹಾಕಿದೀರಿ ಎಂದು ಅವರು ಹೇಳುತ್ತಾರೆ. 6 ತಿಂಗಳು ಮುಂದಕ್ಕೆ ಹಾಕಿರುವುದು ಏಕೆ ಹಾಕಿದ್ದೇವೆ? ಹಾಗೆ ಇನ್ನು ಎರಡು ತಿಂಗಳು ಮುಂದಕ್ಕೆ ಹಾಕುವುದಕ್ಕೆ provision ಮಾಡಿ ಎಂದು ಹೇಳಿ, ದಯಮಾಡಿ, ಈ ಚುನಾವಣೆಗಳನ್ನು ಮುಂದಕ್ಕೆ ಹಾಕಬೇಕು. ಇದಕ್ಕೆ ರಾಜಕೀಯ ಬಣ್ಣವನ್ನು ಲೇಪನ ಮಾಡಬಾರದು. ಗ್ರಾಮೀಣ ಜನ, ಪಟ್ಟಣದಲ್ಲಿರುವ ಕೂಲಿ ಕಾರ್ಮಿಕರ ಹಿತದೃಷ್ಟಿಯಲ್ಲಿ ಈ ಸಮಯದಲ್ಲಿ ಚುನಾವಣೆಗಳು ಅಷ್ಟೊಂದು ಪ್ರಶಸ್ತವಲ್ಲವೆಂದು ಅವರಿಗೆ ನಾನು ಮನವರಿಕೆ ಮಾಡಿಕೊಟ್ಟು, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಚುನಾವಣಾ ಆಯೋಗ ಬಹಳ ಹಿಂದೆಯೇ ಚುನಾವಣೆಯನ್ನು ಘೋಷಣೆ ಮಾಡಿತ್ತು. ಆಗ ಅನೇಕ ನ್ಯೂನತೆಗಳಿವೆ ಎಂದು ಕ್ಷೇತ್ರಗಳ ವಿಂಗಡಣೆ ಮೀಸಲಾತಿ ಇವೆಲ್ಲ ಸರಿಯಾಗಿಲ್ಲವೆಂದು ಹೇಳ ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ, ಉಚ್ಚ ನ್ಯಾಯಾಲಯ, ನೀವು ಬಹಳ ಬೇಗ ಚುನಾವಣೆ ಮಾಡಬೇಕೆಂದು ಚುನಾವಣಾ ಆಯೋಗದ ಮೇಲೆಯೂ ಒತ್ತಡ ತಂದಿದೆ, ಸರ್ಕಾರದ ಮೇಲೆಯೂ ಒತ್ತಡ ತಂದಿದೆ. ನಾವ್ಯಾರೂ ಚುನಾವಣೆಯನ್ನು ನಡೆಸಬಾರದೆಂದು ಅಭಿಪ್ರಾಯ ಹೊಂದಿಲ್ಲ, ನನಗಂತೂ ವೈಯಕ್ತಿಕವಾಗಿ ಇಲ್ಲ. ಚುನಾವಣೆಯನ್ನು ನಡೆಸಬೇಕೆಂದು ಹೇಳುವವನು ನಾನು. ಏಕೆಂದರೆ, ಈ ವಿಕೇಂದ್ರೀಕರಣದ ದೃಷ್ಟಿಯಿಂದ ಬಹಳ ದಿವಸಗಳ ಕಾಲ, ಈಗಾಗಲೇ ಒಂದು ಸಾರಿ ಮುಂದೆ ಹೋಯಿತು, ಮತ್ತೆ ಮುಂದೆ ಹೋಗತಕ್ಕಂಥದ್ದು ಸರಿಯದ ಕ್ರಮವಲ್ಲ. ಎಲ್ಲಿಯೋ ಒಂದು ಕಡೆ ಕಾರಣವೇನೆನ್ನುವ ಪ್ರಶ್ನೆ ಬಂದಾಗ, ಚುನಾವಣಾ

ಆಯೋಗದ ಬಗ್ಗೆ ನನಗೆ ಬಹಳ ಗೌರವವಿದೆ. ಚುನಾವಣಾ ಆಯುಕ್ತರ ಬಗ್ಗೆಯೂ ನನಗೆ ಬಹಳ ಗೌರವವಿದೆ. ಅವರು ಪ್ರಾಮಾಣಿಕವಾಗಿ, ಅವರ ಕರ್ತವ್ಯವನ್ನು ಸ್ಪಷ್ಟವಾಗಿ, ನೇರವಾಗಿ ಮಾಡಿದ್ದಾರೆ. ಅವರು ನ್ಯಾಯಾಲಯಕ್ಕೆ ಏನು ಹೇಳಿದ್ದರು, ಆ ಪ್ರಕಾರ ಚುನಾವಣೆಗೆ ಕಾಲ ನಿಗದಿಯನ್ನು ಮಾಡಿದ್ದಾರೆ, ಯಾವಾಗ ಮಾಡಬೇಕೆಂದು ಸಮಯವನ್ನು ನಿಗದಿ ಮಾಡಿದ್ದಾರೆ. ಕರೆಯುವಾಗ, ಎಲ್ಲಿಯೋ ಒಂದು ಕಡೆ ಈ ಸಮಯ, ಸಂದರ್ಭ ಇದನ್ನು ಸ್ವಲ್ಪ ಅವರು ನೋಡಬೇಕಾಗಿತ್ತೆನ್ನುವುದು ಬಿಟ್ಟರೆ, ಚುನಾವಣೆ ನಡೆಯಬಾರದೆನ್ನತಕ್ಕಂಥದ್ದು ಎನ್ನುವುದಕ್ಕೆ ನಾನಂತೂ ತಯಾರಾಗಿಲ್ಲ, ಚುನಾವಣೆಗೆ ನಾವೆಲ್ಲ ತಯಾರಾಗಬೇಕು, ಹೋಗಬೇಕು, ಆ ಬಗ್ಗೆ ಎರಡನೇ ಅಭಿಪ್ರಾಯವಿಲ್ಲ. ಆದರೆ, ಮತ್ತೆ ಇದನ್ನು ಮುಂದೂಡಿಕೊಂಡು, ಇದಕ್ಕೆ ಕಾರಣ ಇದೆಯಲ್ಲ, ಅದು ಅತ್ಯಂತ ಸೀಮಿತವಾದ ಕಾರಣ. ಮಳೆಗಾಲ ಬಹಳ ಪ್ರಾಮುಖ್ಯ, ಈ ಮಳೆಗಾಲದ ಬಗ್ಗೆ ಅನೇಕ ಕಡೆ ಇವತ್ತು ತಾವೆಲ್ಲ ನೋಡಿದ್ದೀರಿ, ವಿಪರೀತವಾದಂಥ ಮಳೆಯಲ್ಲಿ ಸುಮಾರು 10–12 ಜನ ಸತ್ತಿದ್ದಾರೆ, ಪ್ರವಾಹ ವಿಪರೀತವಾಗಿದೆ. ರಾಜ್ಯದಲ್ಲಿ ಅನೇಕ ಕಡೆ ಕಾಮಗಾರಿಗಳೆಲ್ಲ ಸ್ಥಗಿತವಾಗಿದೆ. ಈಗ ಅನೇಕ ತೊಂದರೆಗಳು, ನ್ಯೂನತೆಗಳಿವೆ. ಇಷ್ಟಾದರೂ, ಇದನ್ನು ಚುನಾವಣಾ ಆಯೋಗ ನಾವ್ಯಾರೂ ಶಾಸನ ಸಭೆಯಿಂದ ನಾವೇನೋ ಚುನಾವಣೆ ಮಾಡತಕ್ಕಂಥದ್ದನ್ನು ವಿರೋಧ ಮಾಡುತ್ತಿದ್ದೇವೆ, ಎಲ್ಲಾ ಪಕ್ಷದವರೂ ಏನೋ ಒಂದೊಂದು ಕಡೆ ಸಂಘಟನೆಯಾಗಿ ವಿರೋಧ ಮಾಡುತ್ತಾರೆನ್ನುವ ಭಾವನೆ ನನ್ನ ದೃಷ್ಟಿಯಿಂದ ಬರಬಾರದು. ಅದಕ್ಕಾಗಿ ನಾನು ಹೇಳುತ್ತೇನೆ, ಅದೊಂದು ಕಾಲಮಿತಿಯನ್ನು ಚುನಾವಣಾ ಆಯೋಗದವರು ನೋಡುವುದಾದರೆ, ಅವರು ಇದರ ಬಗ್ಗೆ ಚಿಂತನೆ ಮಾಡಲಿ. ಇಲ್ಲವೆಂದರೆ, ಚುನಾವಣಾ ಆಯೋಗದ ಮೇಲೆ ನೀವು ಮಾಡಿರತಕ್ಕಂಥದ್ದು ಸರಿಯಾದ ಕ್ರಮ ಅಲ್ಲ, ನೀವು ಚುನಾವಣೆಗೆ ಹೋಗುವುದು ವ್ಯವಸ್ಥೆಯಲ್ಲ, ನಾವು ಇದಕ್ಕೆ ವಿರೋಧ ಮಾಡುತ್ತೇವೆನ್ನುವ ಪ್ರಶ್ನೆಗೆ ನಾನಂತೂ ಹೋಗುವುದಿಲ್ಲ ಚುನಾವಣೆ ಬೇಕೆಂದು ಹೇಳತಕ್ಕಂಥ ವ್ಯಕ್ತಿ ನಾನು. ಆದರೆ, ಸಂದರ್ಭ ಎನ್ನುವ ಬಗ್ಗೆ ಅವರು ಪುನರ್ ಪರಿಶೀಲನೆ ಮಾಡುವುದಾದರೆ ಮಾಡಲಿ ಎಂಬುದು ನನ್ನ ಒತ್ತಾಯ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಚುನಾವಣೆ ಬಗ್ಗೆ ನಮ್ಮದ್ಯಾರದೂ ತಕರಾರಿಲ್ಲ. ನಿನ್ನೆ ಮಳೆಯಿಂದಾಗಿ ಕರ್ನಾಟಕ ರಾಜ್ಯದಲ್ಲಿ 12 ಜನ ಸತ್ತಿದ್ದಾರೆ. ಅದರಲ್ಲೂ ಹೆಚ್ಚಾಗಿ ಮಲೆನಾಡು ಪ್ರದೇಶದಲ್ಲಿ ಪರಿಸ್ಥಿತಿ ಭಾರಿ ಗಂಭೀರವಾಗಿದೆ. ವಾತಾವರಣ ಇಲಾಖೆಯವರು ರಾತ್ರಿ ಕೊಟ್ಟಿರತಕ್ಕಂಥ ಸೂಚನೆಯ ಮೇರೆಗೆ ಬಂಗಾಳಕೊಲ್ಲಿಯಲ್ಲಿ ವಾಯು ಒತ್ತಡ ಕುಸಿದಿದೆ, ವಾಯುಭಾರ ಕುಸಿದಿದೆ. ಅದು ಇನ್ನೂ 3–4 ದಿವಸಗಳಲ್ಲಿ ಅಥವಾ ಒಂದು ವಾರದಲ್ಲಿ ಏನೇನು ಪರಿಣಾಮಗಳು ಬೀರುತ್ತದೆಂಬುದನ್ನು ನಾವು ಊಹೆ ಮಾಡಲಿಕ್ಕೆ ಸಾಧ್ಯವಿಲ್ಲ. ಇದು ಉತ್ತರ ಭಾರತದಲ್ಲಿ ನಡೆಯುತ್ತಿರುವ, ಆಗುತ್ತಿರುವಂಥ ಪರಿಸ್ಥಿತಿ. ಉತ್ತರ ಭಾರತದಲ್ಲಿ ಸತತವಾಗಿ 10 ದಿವಸಗಳಿಂದ ಎಲ್ಲಾ ರೀತಿಯಾದಂಥ ಸಂಪರ್ಕಗಳು, ಕಡಿದುಹೋಗಿವೆ. ಇವತ್ತಿನ ಹಿಂದೂ ಪತ್ರಿಕೆಯಲ್ಲೊಂದು ಫೋಟೋ ಬಂದಿದೆ. ಒಂದೇ ಒಂದು ಮನೆಯ terrace ಮೇಲೆ ಸುಮಾರು ಒಂದು ವಾರದಿಂದ 100 ಜನ ಜೀವನ ಮಾಡುತ್ತಿದ್ದಾರೆ. ಆ ಪರಿಸ್ಥಿತಿ ಈಗ ನಮ್ಮಲ್ಲೂ, ಮಲೆನಾಡಿನಲ್ಲಿ ಪ್ರತ್ಯೇಕವಾಗಿ ಪ್ರಾರಂಭವಾಗಿದೆ. ನಮ್ಮ ಕೋಲಾರ ಜಿಲ್ಲೆಯಂಥ ಜಿಲ್ಲೆಯಲ್ಲೂ ಕೂಡ ನಮ್ಮಲ್ಲೇನೂ ಕೆರೆಗಳು ತುಂಬಲಿಲ್ಲ, ನಮಗೇನೂ ದೊಡ್ಡ ಮಳೆ ಏನೂ ಇಲ್ಲ, ಆದರೆ ಹೊರಗಡೆ ಬರಲಿಕ್ಕಾಗುವುದಿಲ್ಲ ಆ ರೀತಿಯಲ್ಲಿ ಜಿನುಗು ಮಳೆ ಬೀಳುತ್ತಿದೆ. ಏನೂ ಕೆಲಸಗಳು ನಡೆಯುತ್ತಿಲ್ಲ, ಜನರು ಹೊರಗಡೆ ಬರಲಿಕ್ಕಾಗುತ್ತಿಲ್ಲ. ಇನ್ನೊಂದು ಕಡೆ ಬೆಳೆಗಳು, ಕೃಷಿ ಕಾರ್ಯ ಇವೆಲ್ಲ ಚುರುಕಾಗಿ ನಡೆಯತಕ್ಕಂಥ ಸಂದರ್ಭವಿದು. ಈ ಸಂದರ್ಭದಲ್ಲಿ ಸರ್ಕಾರದವರು ಹೇಗೆ ಚುನಾವಣೆ ನಡೆಸಬೇಕೆಂದು ತೀರ್ಮಾನ ಮಾಡಿದ್ದಾರೆಂದು ನನಗಂತೂ ಅರ್ಥವಾಗುತ್ತಿಲ್ಲ. ಒಂದು ಕಡೆ, ಜನ ಸಾಯುತ್ತಿದ್ದಾರೆ. ಮೊನ್ನೆ ಚುನಾವಣಾ ಆಯೋಗದವರು ಹೇಳುವಾಗ, ನಾನು ಟಿ.ವಿ. ಯಲ್ಲಿ ಗಮನಿಸಿದೆ, ಏನಾದರೂ ಅನಾಹುತಗಳಾದರೆ, ಅಂದರೆ, ನಮ್ಮ ದೇಶದಲ್ಲಿ ಅನಾಹುತಗಳಾದರೆ ಮಾತ್ರ ಏನಾದರೂ ಕ್ರಮ ತೆಗೆದುಕೊಳ್ಳಬೇಕು, ಅದಕ್ಕೆ ಮುನ್ನೆಚರಿಕ್ಕೆ ಕ್ರಮ ಬೇಡವೆಂದೆನಾದರೂ ತಿರ್ಮಾನ ಮಾಡಿದ್ದಾರೆಯೇ? ಹೇಗೆ? ಈಗ position of law ಏನೆಂದು ಬಹಳ ಸ್ಪಷ್ಟವಾಗಿ ಮಾಧುಸ್ವಾಮಿಯವರು ಹೇಳಿದ್ದಾರೆ. ನಾನು ಅದರ ಬಗ್ಗೆ ಹೇಳುವುದಿಲ್ಲ. ಆದರೆ, ಪರಿಸ್ಥಿತಿ, ನಾವು ಯಾವಾಗಲೂ letter of spirit ಎಂದು ಮಾತನಾಡುತ್ತೇವೆ. ಆದರೆ ಕೇವಲ letter ಅನ್ನು

ಓದುತ್ತೇವೆಯೇ ಹೊರೆತು ಅದರ spirit ಅನ್ನು ಮಾತ್ರ ಅರ್ಥಮಾಡಿಕೊಳ್ಳಲಿಕ್ಕೆ ನಾವು ಪ್ರಯತ್ನ ಮಾಡುತ್ತಿಲ್ಲ. Letter and spirit ಎಂದು ಹೇಳಿ ನಮ್ಮ Constitution ನಲ್ಲಿ ಕೂಡ ಭಾರೀ ಸ್ಪಷ್ಟವಾಗಿ ನಾವು letter and spirit ಎಂದು ನಾವು ಹೋಗಬೇಕೆಂದು ಹೇಳಿದ್ದಾರೆ. ಅದರೆ, ಏನಾಗುತ್ತಿದೆ ಎಂದರೆ, ಕೆಲವರಿಗೆ ಈ letter ಅಷ್ಟೇ ಓದುವುದು, ಅದರ spirit ಅನ್ನು ಅರ್ಥ ಮಾಡಿಕೊಳ್ಳತಕ್ಕಂಥ ಸ್ಥಿತಿಯಲ್ಲಿ ಇವರು ಇಲ್ಲ. ಚುನಾವಣೆ ಎಂದರೇನು? ಜನ Participate ಮಾಡಬೇಕು. Democracy ಯಲ್ಲಿ ಜನ participate ಮಾಡದೇ, ನೀವು ಚುನಾವಣೆ ನಡೆಸಲಿಕ್ಕಾಗುವುದಿಲ್ಲ. ಜನ ಚುನಾವಣೆಯಲ್ಲಿ ಮುಕ್ತವಾಗಿ participate ಮಾಡತಕ್ಕಂಥ ಪರಿಸ್ಥಿತಿ ಇವತ್ತು ಕರ್ನಾಟಕ ರಾಜ್ಯದಲ್ಲಿ ಇದೆಯೇ? ನನ್ನ ಪ್ರಕಾರ ಇಲ್ಲ. ಒಂದು ಕಡೆ, ಅತೀವೃಷ್ಟಿ ಇನ್ನೊಂದು ಕಡೆ, ಇನ್ನೊಂದು ಸಮಸ್ಯೆ ಹೀಗೆಲ್ಲ ಆಗಿದೆ. ಮಲೆನಾಡಿನಲ್ಲಂತೂ ಒಂದು ಕಡೆ ನಕ್ಸಲೈಟರ ಕಾಟ ಇನ್ನೊಂದು ಕಡೆ ಮಳೆ ಕಾಟ ಅವರು ಹೊರಗಡೆಯೂ ಬರುವ ಹಾಗಿಲ್ಲ, ಒಳಗಡೆಯೂ ಇರುವ ಹಾಗಿಲ್ಲ. 5–6 ಜಿಲ್ಲೆಗಳಲ್ಲಿ ಅಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಎಲ್ಲಾ ಕಡೆ ಇವತ್ತು ವಾತಾವರಣ, ಭಾರೀ ಗಂಭೀರವಾದ ಪರಿಸ್ಥಿತಿ ಇದೆ. ಆದ್ದರಿಂದ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳತಕ್ಕಂಥದ್ದು ಎಂದರೆ, ಕನಷ್ಟ 2 ತಿಂಗಳಾದರೂ August, September ಬಿಟ್ಟು ನೀವು ಚುನಾವಣೆ ನಡೆಸಿ. ನಾವೇನೂ ಚುನಾವಣೆಗೆ ವಿರೊಧವಿಲ್ಲ ಅಥವಾ ಚುನಾವಣಾ ಆಯೋಗದವರ ತೀರ್ಪಿಗೆ ನಾವು ವಿರೋಧವಿಲ್ಲ. ಸರ್ಕಾರದವರು ಕೂಡ ಇದರ ವಾಸ್ತವ ಪರಿಸ್ಥಿತಿಯನ್ನು ದಯವಿಟ್ಟು ಅರ್ಥಮಾಡಿಕೊಳ್ಳಲಿ. ಯಾರೂ ಇಲ್ಲಿ ಪ್ರತಿಷ್ಟೆ ಮೇಲೆ ನಿಲ್ಲತಕ್ಕಂಥ ಅವಶ್ಯಕತೆ ಇಲ್ಲ ಕೋರ್ಟ್‌ನವರು ಕೂಡ ನೀವು ಸಂವಿಧಾನ ಬದ್ಧವಾಗಿ ಚುನಾವಣೆ ನಡೆಸಬೇಕೆಂದು ಹೇಳಿದ್ದಾರೆಯೇ ಹೊರತು ಇಂಥ ದಿವಸದಲ್ಲಿಯೇ ಮಾಡಿ ಮುಗಿಸಬೇಕೆಂದು ಹೇಳಿ ಏನು direction ಕೊಟ್ಟಿಲ್ಲ. High Court ನಿಂದೇನೂ ಇಂಥ ತಾರೀಖಿನೊಳಗೇ ನೀವು ಮುಗಿಸಬೇಕೆಂದು direction ಕೊಟ್ಟಿಲ್ಲ. ಚುನಾವಣೆ ನಡೆಸಬೇಕು, ಅದು ಸಂವಿಧಾನಬದ್ಧ ಕರ್ತವ್ಯ ಎಂದು ಹೇಳಿದ್ದಾರೆ. ಚುನಾವಣೆ ನಡೆಸಬೇಕು. ಅದರ ಬಗ್ಗೆ ಯಾರದೂ ತಕರಾರಿಲ್ಲ. Court ಗಾಗಲಿ, ಚುನಾವಣಾ ಆಯೋಗಕ್ಕಾಗಲಿ ನಾವ್ಯಾರೂ ಅವಮಾನ ಮಾಡತಕ್ಕಂಥ

ಅಥವಾ ಅದಕ್ಕೆ ಅಗೌರವ ತೋರಿಸತಕ್ಕಂಥ ಪ್ರಶ್ನೆಯಿಲ್ಲ. ಆದ್ದರಿಂದ, ತಮ್ಮ ಮೂಲಕ ನಾನು ಇಷ್ಟೇ ಕೇಳಿಕೊಳ್ಳತಕ್ಕಂಥದ್ದು, ಕಾನೂನು ಮಂತ್ರಿಗಳಿಗೂ ಕೂಡ ಪರಿಸ್ಥಿತಿ ಗೊತ್ತಿದೆ. ಆದ್ದರಿಂದ ಅವರು ದಯವಿಟ್ಟು ಈ ಚುನಾವಣೆಯನ್ನು at least, 2 ತಿಂಗಳಾದರೂ ಮುಂದೂಡಿ, ಈ ಚುನಾವಣೆಯಲ್ಲಿ ಇಡೀ ಜನರು Participate ಮಾಡುವ ಹಾಗೆ, ಎಲ್ಲಾ ವಿಭಾಗದವರು ಈ ಚುನಾವಣೆಯಲ್ಲಿ participate ಮಾಡುವ ರೀತಿಯಲ್ಲಿ ಅಂಥ ಒಂದು ಅವಕಾಶ ಮಾಡಿಕೊಡಬೇಕು, ದಯವಿಟ್ಟು, ಚುನಾವಣೆಯನ್ನು ಮುಂದಕ್ಕೆ ಹಾಕಬೇಕೆಂದು ತಮ್ಮ ಮುಖಾಂತರ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾಧುಸ್ವಾಮಿ, ವಾಟಾಳ್ ನಾಗರಾಜ್ ಮತ್ತು ಶ್ರೀರಾಮರೆಡ್ಡಿಯವರು ಅನೇಕ ವಿಷಯಗಳನ್ನು ಹೇಳಿದರು. ಈಗ Article 73 ಅದರ ಪ್ರಕಾರವೇ letter ಎಂದೇ ತೆಗೆದುಕೊಳ್ಳಿ, ಮಾಡಿದ್ದರೆ, ಮೇ ತಿಂಗಳಿನಲ್ಲಿಯೇ ಮಾಡಬೇಕಾಗಿತ್ತು. ಈಗ ಮುಂದಕ್ಕೆ ಹಾಕಲಿಕ್ಕೆ ಅವಕಾಶ ಆಗಿದೆ, Administrator ಅನ್ನು appoint ಮಾಡಿಯಾಗಿದೆ. ಈಗ ಮುಂದೆ ಹಾಕಲಿಕ್ಕೇನೂ ತೊಂದರೆ ಇಲ್ಲ. ಹೊಸದಾಗಿ ನೀವು Administrator ಅನ್ನು appoint ಮಾಡುವುದಾಗಿದ್ದರೆ, ಅದೊಂದು point. ಇದು ಹಾಗಲ್ಲ. ಚುನಾವಣೆಯನ್ನು ಯಾವ ಸಮಯದಲ್ಲಿ ಮಾಡಬೇಕಾಗಿತ್ತು, ಅದನ್ನು ಮಾಡಿಲ್ಲ, ಬೇರೆ ಬೇರೆ ಕಾರಣಗಳನ್ನು ಕೊಟ್ಟು ಮುಂದಕ್ಕೆ ಹಾಕಿಯಾಗಿದೆ. ಇವತ್ತು ಎಲ್ಲ ಪುರಸಭೆ, ಪಟ್ಟಣ ಪಂಚಾಯಿತಿ ಚುನಾವಣೆ ಒಟ್ಟಿಗೆ ಮಾಡುತ್ತಿಲ್ಲ. ಕೇವಲ 160 ಮಾತ್ರ ಮಾಡುತ್ತಿರುವಂಥದ್ದಿದೆ. ಹಾಗಿದ್ದರೆ, ಉಳಿದದ್ದನ್ನು ಮುಂದೆ ಹಾಕಲಿಕ್ಕೆ ಅವಕಾಶವಿದ್ದರೆ, ಒಂದು ವೇಳೆ ಮೇ ತಿಂಗಳನಿಂದ ಮುಂದೆ ಹಾಕಲಿಕ್ಕೆ ಅವಕಾಶವಿದ್ದರೆ, ಇನ್ನೊಂದು ಎರಡು ತಿಂಗಳು ಮುಂದೆ ಹಾಕಿದ್ದರೆ ಏನೂ ತೊಂದರೆಯಾಗುವುದಿಲ್ಲ. ನಾನು ಕೇಳುವುದು, ನನ್ನ ಕ್ಷೇತ್ರದಲ್ಲಿ ಚುನಾವಣೆ ಇಲ್ಲ. ಆದರೆ, ನಮ್ಮ ಭಾಗದಲ್ಲಿ ಖಂಡಿತ ಚುನಾವಣೆ ಮಾಡಲಿಕ್ಕೆ ಸಾಧ್ಯವೇ ಇಲ್ಲ. ಮಲೆನಾಡು ಪ್ರದೇಶದಲ್ಲಿ ಹೋಗಲಿಕ್ಕೆ, ಕೇವಲ ಮಲೆನಾಡು ಪ್ರದೇಶವೆಂದು ನಾನು ಹೇಳುವುದಿಲ್ಲ. ಬೇರೆ ಬೇರೆ ಭಾಗದಲ್ಲಿ ಇವತ್ತು ವಿಪರೀತ ಮಳೆಯಾಗಿದೆ. ನಮ್ಮಲ್ಲಿ ನೆರೆ ಹಾವಳಿಯಿಂದಾಗಿ ಅದನ್ನು ದುರಸ್ತಿ ಮಾಡಲಿಕ್ಕೆ ಸರ್ಕಾರದಿಂದ ನೀವೇನು ಕ್ರಮ ಕೈಗೊಳ್ಳುತ್ತೀರಿ ಎಂದು ಕೇಳುವಂಥ ಪರಿಸ್ಥಿತಿಯಲ್ಲಿ ನಾವಿರುವಾಗ

ಚುನಾವಣೆಗೆ ಹೋಗಿ ನಾವು ಮತ ಕೇಳಲಿಕ್ಕೆ ಹೋದಾಗ ಅಲ್ಲಿ ಜನ ನಮ್ಮನ್ನು ಅಟ್ಟಿಸಿಕೊಂಡು ಬರುವ ಪರಿಸ್ಥಿತಿ ಇದೆ. ನಾವು ಇವತ್ತು ಸದನ ಇದೆ ಎಂದು ಇಲ್ಲಿದ್ದೇವೆ ಬಿಟ್ಟರೆ, ಕ್ಷೇತ್ರಕ್ಕೆ ಹೋಗಿ ಎಲ್ಲೆಲ್ಲಿ ಅನಾಹುತವಾಗಿದೆ ಎಂದು ನೋಡುವಂಥದ್ದು, ದುರಸ್ತಿ ಮಾಡುವಂಥದ್ದು ಅದರೊಟ್ಟಿಗೆ ಸರ್ಕಾರವನ್ನು ನಾನು ಕೇಳುವಂಥದ್ದು, ಎಷ್ಟು ಹಣವನ್ನು ತಕ್ಷಣ ಬಿಡುಗಡೆ ಮಾಡುತ್ತೀರಿ ಎಂದು ಕೇಳಬೇಕಾಗಿದೆ. ಇಷ್ಟು ದುರಂತವಾಗಿರುವಾಗ ನಾವು ಮತವನ್ನು ಕೇಳಿಕೊಂಡು ಓಡಾಡಿದರೆ, ಖಂಡಿತ ಜನ ನಮ್ಮನ್ನು ಕ್ಷಮಿಸುವುದಿಲ್ಲವೆಂದು ನಾನು ಭಾವಿಸುತ್ತೇನೆ. ಅದಕ್ಕೋಸ್ಕರ ಸರ್ಕಾರದವರು ತೀರ್ಮಾನವನ್ನು ತೆಗೆದುಕೊಳ್ಳಿ. ಒಂದು ಸಲ ಮುಂದೆ ಹಾಕಿದ್ದೀರಿ. ಮುಂದೆ ಇನ್ನೊಂದೆರಡು ತಿಂಗಳ ಕಾಲ ಮುಂದೆ ಹೋದರೆ ಏನೂ ತೊಂದರೆಯಾಗುವುದಿಲ್ಲ. ಕೇವಲ letter ಮಾತ್ರವಲ್ಲ, letter and spirit ಬಗ್ಗೆ ಆಲೋಚನೆಯನ್ನು ಮಾಡಿ ಎಂದು ತಮ್ಮ ಮುಖೇನ ಸರ್ಕಾರಕ್ಕೆ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಆರ್. ಪಾಟೀಲ್: ಮೊನ್ನೆ ಚುನಾವಣೆ ಘೋಷಣೆಯಾದ ತಕ್ಷಣ ಈ ಸದನಕ್ಕೆ ಸುದ್ದಿ ಬಂದ ಮೇಲೆ ಮುಕ್ತವಾದ ಅಭಿಪ್ರಾಯಗಳು, ಚರ್ಚೆಗಳು ಮಾಡುವುದಕ್ಕೆ ನಮಗೆ ಅಧಿಕಾರವಿದೆ, ಆ ಪ್ರಕಾರ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದೇವೆ. ಅದು ನಮ್ಮ ಹಕ್ಕು. ಆದರೆ, ನಿನ್ನೆ ಪತ್ರಿಕೆಯಲ್ಲಿ, ಶಾಸಕರು ಕುಂಟು ನೆಪ ಎಂದು ಹೇಳಿ ಚುನಾವಣಾ ಆಯುಕ್ತರು ಹೇಳಿದ್ದು ಎಷ್ಟು ಸರಿ? ಅಂದರೆ ನಮಗೇನೂ ಆ ಜನರ ನಾಡಿ ಮಿಡಿತ, ಸಮಸ್ಯೆ ಮತ್ತು ಭಾವನೆಗಳು ಸ್ಥಳೀಯ ಸಮಸ್ಯೆಗಳು ಅರ್ಥವಾಗುವುದಿಲ್ಲವೇ? ಅಥವಾ ಅದರ ಬಗ್ಗೆ ನಮಗೆ ಕಾಳಜಿ ಇಲ್ಲವೋ? ಈ ತರಹ ಹೇಳುವುದರಿಂದ ಇಡೀ ಶಾಸನ ಸಭೆಗೆ ಒಂದು ತಪ್ಪು ಕಲ್ಪನೆ ಬರುವಂಥ ಮಾತನ್ನು ಚುನಾವಣಾ ಆಯುಕ್ತರು ಹೇಳಿದ್ದಾರೆ. ಆ ರೀತಿ ಹೇಳಬಾರದು. ಸಂಘರ್ಷಕ್ಕೆ ಇಳಿಯಬಾರದು. ನಮ್ಮ ಕರ್ತವ್ಯವನ್ನು ನಾವು ಮಾಡುತ್ತೇವೆ. ಕೊನೆಗೆ, ಕಾನೂನು, ಸರ್ಕಾರ ಮತ್ತು ಯಾವ ನಿರ್ಣಯವಾಗುತ್ತದೆ, ಆ ನಿರ್ಣಯಕ್ಕೆಲ್ಲ ನಾವು ತಲೆಬಾಗಬೇಕಾಗುತ್ತದೆ. ಚುನಾವಣೆ ಆದರೆ ಆಗಲಿ, ಅದಕ್ಕೇನಿಲ್ಲ. ಆದರೆ, ಒಬ್ಬ ಜವಾಬ್ದಾರಿ ಸ್ಥಾನದಲ್ಲಿರುವ ಚುನಾವಣಾ ಆಯುಕ್ತರು 'ಶಾಸಕರ ಕುಂಟುನೆಪ' ಎಂದು

ಹೇಳುವುದು ಇದು ಬಹಳ ಮನಸ್ಸಿಗೆ ಬೇಸರವಾಯಿತು. ಆವತ್ತೇನೋ spontaneous ಆಗಿ ಸಂಜೆ paper ನಲ್ಲೆಲ್ಲ ಬಂತು, ನಮ್ಮ ವೀರಬಸವಂತರೆಡ್ಡಿಯವರು ಅದನ್ನು ಪ್ರಸ್ತಾಪ ಮಾಡಿದರು. ನಾಲ್ಕಾರು ಜನ ಹಿರಿಯ ಸದಸ್ಯರು ಅದರ ಬಗ್ಗೆ ಮಾತನಾಡಿದರು. ಇದಕ್ಕೆ ಬಿಟ್ಟು ನಾವೇನೂ ಚುನಾವಣಾ ಆಯೋಗದ ಮೇಲೆ ಹರಿಹಾಯ್ದಿಲ್ಲ ಅಥವಾ ಅವರ ಮೇಲೇನೂ ಆಕ್ರಮಣ ಮಾಡಿಲ್ಲ, ಅವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಿ ಎಂದಲ್ಲ, ಅದನ್ನು ಖಂಡನೆ ಮಾಡಿಲ್ಲ, ಈ ಸದನದಲ್ಲಿ ಮುಕ್ತವಾಗಿ ಅಭಿಪ್ರಾಯ ವ್ಯಕ್ತಮಾಡಿದ್ದೇವೆ. ಈ ಮಾತು ಹೇಳಿದ್ದನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು ಮತ್ತು ಈ ಚರ್ಚೆಗೆ ಏನಾದರೊಂದು ಇತಿಶ್ರೀ ಹಾಡಬೇಕು. ಏಕೆಂದರೆ, ತಾವು ಈ ಸದನದ ಮುಖ್ಯಸ್ಥರು. ನೀವು ನಮ್ಮ custodian. ನಮ್ಮೆಲ್ಲರ ಭಾವನೆಗಳನ್ನು, ನಮ್ಮ ರಕ್ಷಣೆ ಮಾಡುವಂಥ, ನಮ್ಮ ಘನತೆಯನ್ನು ಕಾಪಾಡಿಕೊಳ್ಳುವವರು ನೀವು, ಆ ಬಗ್ಗೆಯೂ ತಾವು ಚಿಂತನೆ ಮಾಡಬೇಕೆಂದು ನಾನು ಮನವಿ ಮಾಡುತ್ತೇನೆ.

ಶ್ರೀ ಸಿ.ಟಿ. ರವಿ: ನಾವೆಲ್ಲ ಚುನಾಯಿತರಾಗಿ ಬಂದವರು. ಚುನಾವಣೆಗೆ ಹೆದರುವ ಪ್ರಶ್ನೆ ಇಲ್ಲವೇ ಇಲ್ಲ. ಯಾವತ್ತಿದ್ದರೂ ಚುನಾವಣೆ ಎದುರಿಸಿಯೇ ಎದುರಿಸುತ್ತೇವೆ. ಅದಕ್ಕೆ ರಾಮಚಂದ್ರೇಗೌಡರು ಒಂದು ಮಾತು ಹೇಳುತ್ತಿದ್ದರು. ಅಗ್ನಿಶಾಮಕ ದಳದವನು ಬೆಂಕಿ ಬೀಳಬಹುದು, ಬೀಳದಿರಬಹುದು ಅವನು dress ಹಾಕಿಕೊಂಡು ಕಾಯುತ್ತಲೇ ಇರಬೇಕು. ಹಾಗೆಯೇ, ರಾಜಕೀಯ ಪಕ್ಷ ಚುನಾವಣೆಗೆ ಎಲ್ಲಾ ಕಾಲಕ್ಕೂ ಸಿದ್ಧವಾಗಿಯೇ ಇರುತ್ತದೆ. ಆದರೆ, ನಮ್ಮ ಕಡೆ ಈಗ ಹಳ್ಳ ಮತ್ತು ರಸ್ತೆ ಎರಡೂ ಒಂದೇ ಆಗಿದೆ. ಹಳ್ಳ ಯಾವುದು, ರಸ್ತೆ ಯಾವುದೆಂದು ಗೊತ್ತಾಗದಿರುವ ಸ್ಥಿತಿಯಲ್ಲಿ ನೀರು ಹರಿಯುತ್ತಿದೆ. ಈ ಸಮಯದಲ್ಲಿ ಚುನಾವಣೆ ಮಾಡುವುದರಿಂದ ಜನರೂ ಅಲ್ಲ, ರಾಜಕೀಯ ಕಾರ್ಯಕರ್ತರೂ participate ಮಾಡುವುದಕ್ಕಾಗುವುದಿಲ್ಲ. ಹಾಗಾಗಿ, ಅವರೇ ವೀಕ್ಷಕರನ್ನು ಕಳುಹಿಸಲಿ. ಚುನಾವಣಾ ಆಯೋಗವೇ ಸ್ವತಂತ್ರ ವೀಕ್ಷಕರನ್ನು ಕಳುಹಿಸಲಿ. ನಮ್ಮ ಜಿಲ್ಲೆಗಳನ್ನು ಅಧ್ಯಯನ ಮಾಡಲಿ. ವಾಸ್ತವಿಕವಾಗಿ ಚುನಾವಣೆ ಮಾಡಬಹುದೆಂದು ಅವರಿಗೆ ಅನಿಸಿದರೆ ಚುನಾವಣೆ ಮಾಡಲಿಕ್ಕೆ ತಯಾರಿ ಮಾಡಲಿ. ಅದು ಬಿಟ್ಟು ರಾಜಕೀಯ ಪಕ್ಷಗಳು ಕುಂಟು ನೆಪ ಹೇಳುತ್ತವೆ, ಶಾಸಕರು ಕುಂಟು

ನೆಪ ಹೇಳುತ್ತಾರೆ ಎಂದರೆ ಚುನಾಯಿತರಾಗಿ ಬಂದಿರುವ ನಮಗೆಲ್ಲರಿಗೂ ಮಾಡತಕ್ಕಂಥ ಅಪಮಾನ. ಕುಂಟು ನೆಪದ ಪ್ರಶ್ನೆ ಏನೂ ಇಲ್ಲ. ಈಗಿನ ಪರಿಸ್ಥಿತಿ ಹಾಗಿದೆ. ಹಾಗಾಗಿ ಅವರೇ ಸ್ವತಂತ್ರ ಅಧ್ಯಯನ ಮಾಡಿ ತೀರ್ಮಾನ ತೆಗೆದುಕೊಳ್ಳಲಿ. ಆ ದೃಷ್ಟಿಯಿಂದ ಸರ್ಕಾರ ಕ್ರಮ ಕೈಗೊಳ್ಳಬೇಕು.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ ಇಲಾಖೆ):– ಸನ್ಮಾನ್ಯ ಅಧ್ಯಕ್ಷರೇ, ಚುನಾವಣಾ ಆಯುಕ್ತರು ಹೊರಡಿಸಿರುವ ಅಧಿಸೂಚನೆಯ ಪೂರ್ವಭಾವಿಯಾಗಿ ಕೆಲವು ಸಂಜೆ ಪತ್ರಿಕೆಗಳಲ್ಲಿ ಬಂದ ವರದಿಯ ಆಧಾರದ ಮೇಲೆ ಡಾ: ವೀರಬಸವಂತರೆಡ್ಡಿಯವರು ಮತ್ತು ಅನೇಕ ಹಿರಿಯ ಸದಸ್ಯರುಗಳು ಈ ವಿಚಾರದಲ್ಲಿ ತಮ್ಮ ಆಕ್ಷೇಪಣೆಗಳನ್ನು ವ್ಯಕ್ತ ಮಾಡುತ್ತಾ, ಈ ಚುನಾವಣೆಯನ್ನು ತತ್‌ಕ್ಷಣದಲ್ಲಿ ಮಾಡುವುದಕ್ಕೆ ಅಧಿಸೂಚನೆಯನ್ನು ಹೊರಡಿಸತಕ್ಕಂಥದ್ದಕ್ಕೆ ಸರಿಯಾದಂಥ ಸಮಯವಲ್ಲ, ಆದ್ದರಿಂದ ಆ ರೀತಿಯಾಗಿ ಮಾಡಬಾರದೆಂಬ ಅಭಿಪ್ರಾಯವನ್ನು ವ್ಯಕ್ತ ಮಾಡುವುದರ ಜೊತೆಗೆ ಇದರ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡಬೇಕೆಂಬ ಅಭಿಪ್ರಾಯಗಳು ಸಹ ಬಂತು ಕಾರ್ಯಕಲಾಪಗಳ ಸಮಿತಿಯಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿದಾಗ 6 ಮತ್ತು 7ನೇ ತಾರೀಖಿನ ದಿವಸ ಕೆಲವು ಮಸೂದೆಗಳ ಬಗ್ಗೆ ಚರ್ಚೆ ಮಾಡತಕ್ಕಂಥದ್ದು ಹಾಗೂ ಅರ್ಧ ಗಂಟೆ ಕಾಲಾವಧಿ ವಿಷಯಗಳ ಬಗ್ಗೆ ಚರ್ಚೆ ಮಾಡತಕ್ಕಂಥ ಹಿನ್ನೆಲೆಗಳಿರುವುದರಿಂದ 6ನೇ ತಾರೀಖಿನ ದಿವಸ ಸಭೆ ಪ್ರಾರಂಭವಾದಾಗ ಈ ಬಗ್ಗೆ ಕೂಡ ಚರ್ಚೆ ಮಾಡಬೇಕೆನ್ನುವಂಥ ಅವತ್ತಿನ ನಿರ್ಣಯಕ್ಕೆ ಅನುಗುಣವಾಗಿ ತಾವು ಮಾನ್ಯ ಎಲ್ಲಾ ಹಿರಿಯ ಸದಸ್ಯರುಗಳು ಈ ವಿಚಾರದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಈ ಸಂದರ್ಭದಲ್ಲಿ ನಾವು ಪ್ರಸ್ತಾವಿಕವಾಗಿ ಮೊಟ್ಟ ಮೊದಲಿಗೆ ಪ್ರಸ್ತಾಪ ಮಾಡತಕ್ಕಂಥದ್ದು ಏನೆಂದರೆ ಈ ಸಮ್ಮಿಶ್ರ ಸರ್ಕಾರ ಚುನಾವಣೆಗಳನ್ನು ನಡೆಸುವುದಕ್ಕೆ ಹಿಂಜರಿಯುತ್ತಿದೆ ಮತ್ತು ಚುನಾವಣೆಗಳನ್ನು ಮಾಡುವುದಕ್ಕೆ ಕುಂಟು ನೆಪಗಳನ್ನು ಹೇಳುತ್ತಾ ಮುಂದೂಡುತ್ತದೆ ಎಂದು ಹಾಗೂ ಚುನಾವಣೆಗೆ ಇವರು ಸನ್ನದ್ಧರಾಗಿಲ್ಲವೋ ಅಥವಾ ಪ್ರತಿಕೂಲವಾದಂಥ ಅಭಿಪ್ರಾಯಕ್ಕೆ ಬರಬಹುದೆಂಬ ರೀತಿಯಲ್ಲಿ ಬಿಂಬಿಸುವಂಥ ಪ್ರಯತ್ನ ಏನಾಗುತ್ತಿದೆಯೋ ಅದಕ್ಕೆ ನಾವು ನಿಜವಾಗಿಯೂ ಕೂಡ ವಿರೋಧ ಮಾಡಿದ್ದೇವೆ. ಇದರ

ಜೊತೆಗೆ ಸರ್ವಪಕ್ಷಗಳಲ್ಲಿರತಕ್ಕಂಥ ಸದಸ್ಯರ್ಯಾರೂ ಕೂಡ ಚುನಾವಣೆಗಳನ್ನು ವಿರೋಧ ಮಾಡತಕ್ಕಂಥದ್ದು ಅಥವಾ ಚುನಾವಣೆಗಳನ್ನು ಮುಂದಕ್ಕೆ ಹಾಕತಕ್ಕಂಥ ನೆಪದಿಂದ ನಾವು ಏನನ್ನೂ ಪಡೆಯತಕ್ಕಂಥ ಅಗತ್ಯತೆಯಿಲ್ಲ. ಎಷ್ಟೆಷ್ಟೋ ಚುನಾವಣೆಗಳು ಆಗುತ್ತವೆ. ಜನತೆಯು ಕೈಗೆ ಅಧಿಕಾರ ಕೊಟ್ಟಾಗ ಅಷ್ಟರ ಮಟ್ಟಿಗೆ ಸರ್ಕಾರ ಮತ್ತು ಶಾಸಕರ ಜವಾಬ್ದಾರಿಗಳು, ಒತ್ತಡಗಳೂ ಸಹ ಕಡಿಮೆಯಾಗುತ್ತವೆ. ನಿಮಗೆಲ್ಲಾ ಹಿಂದೆ ಆಗಿರತಕ್ಕಂಥದ್ದು ಗೊತ್ತಿರುವಂತೆ ಸುಮಾರು 13 ವರ್ಷಗಳ ಕಾಲ ಮಹಾನಗರ ಪಾಲಿಕೆಗೆ ಚುನಾವಣೆಯಾಗಿರಲಿಲ್ಲ. ಆ ಸಂದರ್ಭದಲ್ಲಿ ಸರ್ಕಾರ ನಿರ್ಧಾರ ತೆಗೆದುಕೊಂಡು ಒಂದು ಸಂದರ್ಭದಲ್ಲಿ ಸುಮಾರು 10, 12 ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಮತ್ತು ಸೇವಾ ಸಹಕಾರ ಸಂಘಗಳ ಚುನಾವಣೆ ಹಾಗೂ ಜಿಲ್ಲಾ ಪಂಚಾಯತ್ ಚುನಾವಣೆಗಳನ್ನು ಎಲ್ಲಾ ಸರ್ಕಾರಗಳು ಮಾಡಿದ್ದಾವೆ. ಕ್ಲುಪ್ತ ಕಾಲದಲ್ಲಿ, ಚುನಾವಣೆಗಳನ್ನು ನಡೆಯಬೇಕೆಂದು ಸಂವಿಧಾನದ 73ನೇ ತಿದ್ದುಪಡಿಗೆ ನಾವು ಇವತ್ತೂ ಕೂಡ ಬದ್ಧರಾಗಿದ್ದೇವೆ. ಆ ಬದ್ಧತೆಗೆ ಅನುಗುಣವಾದಂಥ ರೀತಿಯಲ್ಲಿ ಮೀಸಲಾತಿಯನ್ನು ಪ್ರಕಟಿಸುವಂಥ ಸಂದರ್ಭದಲ್ಲಿ ಅದು ಅದರ ನಿಜವಾದಂಥ ಅರ್ಥಕ್ಕೆ ಅನುಗುಣವಾಗಿರಬೇಕು. ಮೀಸಲಾತಿಗೆ ಬೇಕಾಗಿರತಕ್ಕಂಥ ಅಂಕಿ-ಸಂಖ್ಯೆಗಳ ಮೂಲಕವಾಗಿ ಆ ಮೀಸಲಾತಿ ರಾಜಕೀಯ ಪ್ರೇರೇಪಿತವಾಗಿ ಕೆಲವು ವರ್ಗದ ಜನಕ್ಕೆ ಅಥವಾ ಕೆಲವು ಜನಗಳಿಗೆ ಮಾತ್ರ ಅದು ಅನುಕೂಲವಾಗುವಂತಾಗಬಾರದೆಂಬ ಕಾರಣಕ್ಕಾಗಿಯೇ ಚುನಾವಣಾ ಆಯುಕ್ತರಿಗೆ ಸಂಪೂರ್ಣವಾದಂಥ ಅಧಿಕಾರವನ್ನು ಅಂದರೆ, ಚುನಾವಣೆ ದಿನಾಂಕವನ್ನು ನಿರ್ಧಾರ ಮಾಡಿ ಅದನ್ನು ಘೋಷಿಸುವ ಮತ್ತು ಮೀಸಲಾತಿಯನ್ನು ನಿರ್ಧರಿಸುವ, ಕಾಲಕಾಲಕ್ಕೆ ಚುನಾವಣೆಯನ್ನು ನಡೆಸುವ ಅಧಿಕಾರವನ್ನು ಈ ಸಭೆಯೇ ಆ ಒಂದು ಕಾನೂನಿಗೆ ತಿದ್ದುಪಡಿ ತಂದಿರತಕ್ಕಂಥದೆಂದು ಎಲ್ಲರಿಗೂ ಸಹ ಗೊತ್ತಿದೆ. ಹಿಂದೆ ಕೂಡ ಇಂಥದ್ದೇ ಒಂದು ಪ್ರಯತ್ನ ನಡೆದು, ಚುನಾವಣಾ ಆಯುಕ್ತರಿಗೆ ಕೊಟ್ಟಿರುವಂಥ ಅಧಿಕಾರವನ್ನು ಮತ್ತೆ ಸರ್ಕಾರ ತನ್ನ ಸ್ವಾಧೀನಕ್ಕೆ ತಗೆದುಕೊಂಡಿತು. ಆದರೆ, ಅದೂ ಕೂಡ ಸರಿಯಾದುದಲ್ಲ. ಎಷ್ಟೇ ನಿಷ್ಪಕ್ಷಪಾತವಾಗಿ ನಾವು ನಿರ್ಧರಿಸಿದರೂ ಕೂಡ ಜಿಲ್ಲಾಧಿಕಾರಿಗಳ ಮೂಲಕವಾಗಿ ನಿಮ್ಮ ಪ್ರಭಾವವನ್ನು ಆಳುವ ಸರ್ಕಾರ ಮಾಡಬಹುದೆಂಬ

ವಿವೇಕದ ಮಾತುಗಳನ್ನು ಕಂಡುಕೊಂಡ ನಂತರ ಸರ್ಕಾರ ಮತ್ತೆ ಚುನಾವಣಾ ಆಯುಕ್ತರಿಗೆ ಅಧಿಕಾರವನ್ನು ಕೊಟ್ಟಿದೆ. ಚುನಾವಣಾ ಆಯುಕ್ತರಿಗೆ ಈ ಚುನಾವಣೆ ಮಾಡತಕ್ಕಂಥ ಪ್ರಸ್ತಾಪ ಬಂದಾಗ ನಗರಾಭಿವೃದ್ಧಿ ಇಲಾಖೆಯಾಗಿರಬಹುದು ಅಥವಾ ಸಾರ್ವಜನಿಕರಾಗಿರತಕ್ಕಂಥ ಅನೇಕರು ಮೀಸಲಾತಿ ಪ್ರಕಟಿಸಿರತಕ್ಕಂಥದ್ದರಲ್ಲಿ ಆಗಿರುವಂಥ ಅತಾರ್ಕಿಕತೆ, ಅವೈಜ್ಞಾನಿಕವಾಗಿರತಕ್ಕಂಥ ನಿರ್ಧಾರಗಳ ಬಗ್ಗೆ ನ್ಯಾಯಾಲಯಕ್ಕೆ ಮೊರೆ ಹೋಗಿರತಕ್ಕಂಥದ್ದನ್ನು ತಾವು ಕಂಡಿದ್ದೀರಿ. ಈ ನ್ಯೂನತೆಯನ್ನು ಸರಿಪಡಿಸಬೇಕೆಂದು ನ್ಯಾಯಾಲಯವೂ ಕೂಡ ಹೇಳಿದೆ. ಇಲ್ಲದಿದ್ದರೆ ಚುನಾವಣೆ ಎನ್ನತಕ್ಕಂಥದ್ದು ಒಂದು ಪ್ರಹಸನವಾಗುತ್ತದೆ. It is going to be farcical ಎನ್ನತಕ್ಕಂಥ ಮಾತನ್ನು ಅವರು ಪ್ರಸ್ತಾಪ ಮಾಡಿ, ಪ್ರಹಸನವಾಗಬಾರದೆಂದು ಕಾಲಾವಕಾಶವನ್ನು ಕೊಟ್ಟರು ಸುಮಾರು 9 ವಾರಗಳ ಕಾಲಾವಕಾಶದಲ್ಲಿ 165 ಸ್ಥಳೀಯ ಸಂಸ್ಥೆಗಳ ಸಂಘಟನೆಗಳ ಮೀಸಲಾತಿ ಪ್ರಕಟಣೆಯನ್ನು ನಾವು ಚುನಾವಣಾ ಆಯುಕ್ತರಿಗೆ ಕಳುಹಿಸಿ ಕೊಟ್ಟಿದ್ದೇವೆ. ಇನ್ನೂ 203ಕ್ಕೆ ಮಾಡಬೇಕಾಗಿತ್ತು, ಆದರೆ, 203ಕ್ಕೆ ಮಾಡಬೇಕಾಗಿರತಕ್ಕಂಥ ಸಂದರ್ಭದಲ್ಲಿ ಮಾನ್ಯ ಚುನಾವಣಾ ಆಯುಕ್ತರು ದಿನಾಂಕ 2.08.2007 ರಲ್ಲಿ ಇಲಾಖೆಯ ಮುಖ್ಯಸ್ಥರುಗಳನ್ನು ಕರೆಸಿ, ಅಂದರೆ ಒಳಾಡಳಿತ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳು, ಪೊಲೀಸ್ ಆಯುಕ್ತರು, ಪೊಲೀಸ್ ಮಹಾನಿರ್ದೇಶಕರು, ನಗರಾಭಿವೃದ್ಧಿ ಇಲಾಖೆಯ ಜಂಟಿ ಕಾರ್ಯದರ್ಶಿ ಮತ್ತು ಉದಯಶಂಕರ್, ಅಧೀನ ಕಾರ್ಯದರ್ಶಿ ಹಾಗೂ ರೇವಣ್ಣ, ಅಧೀನ ಕಾರ್ಯದರ್ಶಿ, ಇವರೆಲ್ಲರ ಒಂದು ಸಭೆಯನ್ನು 2.08.2007 ರಂದು ಚುನಾವಣಾ ಆಯುಕ್ತರು ಕರೆದರು. ಆ ಸಂದರ್ಭದಲ್ಲಿ ಅವರು ಮಾಡಿರತಕ್ಕಂಥದ್ದು ಏನೆಂದರೆ, ಅಧಿಸೂಚನೆ ನೀಡಿದ ತಕ್ಷಣ ಆಯೋಗವು ಚುನಾವಣೆ ಅಧಿಸೂಚನೆಯನ್ನು ಪ್ರಕಟಿಸತಕ್ಕಂಥದೆಂದು ಆದೇಶಿಸಿರುವುದನ್ನು ಸಭೆಯ ಗಮನಕ್ಕೆ ತಂದರು. ಇಲ್ಲಿ ನಾವು ಪರಿಗಣಿಸಬೇಕಾಗಿರತಕ್ಕಂಥ ವಿಷಯ ಏನೆಂದರೆ, ಮೀಸಲಾತಿಯನ್ನು ಇನ್ನೂ 203 ಸ್ಥಳೀಯ ಸಂಸ್ಥೆಗಳಿಗೆ ಕೊಡಲಿಕ್ಕೆ ಸಾಧ್ಯವಾಗಿರಲಿಲ್ಲ ಒಂದು ವೇಳೆ 165ಕ್ಕೆ ಚುನಾವಣೆಯನ್ನು ಮಾಡುತ್ತೇನೆಂಬುದು ಅವರ ಅಭಿಪ್ರಾಯವಾಗಿದ್ದರೆ, ಈಗ 203ಕ್ಕೂ

ಮಾಡುತ್ತೇನೆಂಬ ಮಾತನ್ನು ಹೇಳಿದ್ದಾರೆ. ನ್ಯಾಯಾಲಯ ಕೊಟ್ಟಿರುವಂಥ ತೀರ್ಪೇನೆಂದರೆ, ಅನಾವಶ್ಯಕವಾದಂಥ ರೀತಿಯಲ್ಲಿ ಯಾವುದೋ ನೆಪಗಳ ಮೂಲಕವಾಗಿ ಚುನಾವಣೆಯನ್ನು ಮುಂದೂಡತಕ್ಕಂಥದ್ದು ಸಾಧುವಾದುದಲ್ಲ. ತಕ್ಷಣದಲ್ಲಿ ಆಯೋಗವು ಚುನಾವಣೆಯ ಅಧಿಸೂಚನೆಯನ್ನು ಪ್ರಕಟಿಸತಕ್ಕಂಥದ್ದೆಂದು ಆದೇಶಿಸಲಾಗಿದೆ ಎಂದು ಅವರು ಹೇಳಿದ್ದಾರೆ. ಅಂದರೆ, ಇಂಥ ನಿರ್ದಿಷ್ಟವಾದಂಥ ತಾರೀಖಿನ ದಿವಸ ಅಥವಾ ಇಷ್ಟು ಕಾಲಮಿತಿಯೊಳಗಾಗಿ ನೀವು ಚುನಾವಣೆ ಮಾಡಬೇಕೆನ್ನತಕ್ಕಂಥದ್ದು ಇಲ್ಲ. ಚುನಾವಣೆಗಳನ್ನು ಮಾಡುವಾಗ ಅನುಸರಿಸತಕ್ಕಂಥ ಮಾಪನಗಳೇನೆಂದರೆ, ಸರ್ಕಾರ ಜೊತೆಯಲ್ಲಿ ಅವರು ಸಮಾಲೋಚನೆ ಮಾಡಬೇಕು ಅಂದರೆ, ಸರ್ಕಾರ ಸನ್ನದ್ಧವಾಗಿದೆಯೇ ಎಂದು ಸಮಾಲೋಚನೆ ಮಾಡಬೇಕು. ಈಗ ಇರತಕ್ಕಂಥ ಚುನಾವಣಾ ಆಯುಕ್ತರು ಅಥವಾ ಚುನಾವಣಾ ಆಯೋಗಕ್ಕೆ ತನ್ನದೇ ಆಗಿರತಕ್ಕಂಥ ಸಿಬ್ಬಂದಿ ಇಲ್ಲ. ಚುನಾವಣೆ ಎನ್ನತಕ್ಕಂಥದ್ದನ್ನು ಕೇವಲ ತಾಂತ್ರಿಕವಾಗಿ ಆ ತಾರೀಖಿನ ದಿವಸ ನಾವು ಮಾಡಿದ್ದೇವೆಂದು ಅವರು ಹೇಳಬಹುದು. ಆದರೆ, ಪಂಜಾಬಿನಲ್ಲಿ ಯಾವುದೋ ಕಾರಣಕ್ಕಾಗಿ ಮಾಡಿ ಕೇವಲ 5% ಜನ ಮಾತ್ರ ಚುನಾವಣೆಯಲ್ಲಿ ಭಾಗವಹಿಸಿದ್ದರು. ಅದರ ಮೇಲೂ ಕೂಡ ಅಂತರಾಷ್ಟ್ರೀಯ ಮಟ್ಟದಲ್ಲಿ ಬಹಳ ಆಪಾದನೆಗಳು ಬಂತು. ಆ 5% ಜನ ಚುನಾವಣೆಯಲ್ಲಿ ಮತದಾನಕ್ಕೆ ಸಾಲಾಗಿ ನಿಂತಿರತಕ್ಕಂಥವರು ನಿಮ್ಮ ಸೈನ್ಯದ ಮತ್ತು ಪೊಲೀಸ್‌ನ ಸಮವಸ್ತ್ರ ಹಾಕಿಕೊಂಡಿರತಕ್ಕಂಥ ಜನರಲ್ಲ. ಅವರು ತಮ್ಮ ನಾಗರಿಕ ಉಡುಪನ್ನು ಹಾಕಿಕೊಂಡು ನಿಂತುಕೊಂಡಿರತಕ್ಕಂಥವರು ಅದು ನಿಜವಾದಂಥ ಪ್ರಾತಿನಿಧಿಕ ಸ್ವರೂಪದ ಒಂದು ವಿಧಾನಸಭೆಯಾಗಿರಲಿಲ್ಲವೆಂಬುದರ ಬಗ್ಗೆ ಕೂಡ ಚರ್ಚೆಯಾಗಿರತಕ್ಕಂಥ ತಮ್ಮೆಲ್ಲರ ಗಮನಕ್ಕೆ ಬಂದಿರತಕ್ಕಂಥದ್ದು ಗೊತ್ತಿದೆ. ತಾಂತ್ರಿಕವಾಗಿ ಚುನಾವಣೆಯನ್ನು ಮಾಡಿದ್ದೇವೆಂಬ ಸಮಾಧಾನಕ್ಕಿಂತಲೂ ಚುನಾವಣೆ ಮಾಡುವಾಗ ಬಹುಸಂಖ್ಯಾತರಾಗಿರುವಂಥ ಜನ ಅದರಲ್ಲಿ ಭಾಗವಹಿಸಿ ಸ್ಥಳೀಯ ಸಂಸ್ಥೆಗಳಿಗೆ ಆಡಳಿತ ಮಾಡಬೇಕೆಂಬುದರ ಬಗ್ಗೆ ಕನಿಷ್ಟ 50ಕ್ಕಿಂತಲೂ ಹೆಚ್ಚು ಜನ ತಮ್ಮ ಅಭಿಪ್ರಾಯಗಳನ್ನು ಅಭಿವ್ಯಕ್ತಗೊಳಿಸುವುದಕ್ಕೆ ಅವಕಾಶ ಬೇಕು. ಇದರ ಜೊತೆಗೆ ನಿಂತಿರತಕ್ಕಂಥ ಅಭ್ಯರ್ಥಿಗಳು, ಅವರು ಪಕ್ಷದ ಅಭ್ಯರ್ಥಿಗಳಾಗಿರಬಹುದು ಅಥವಾ ಸ್ವತಂತ್ರ ಪಕ್ಷದ

ಅಭ್ಯರ್ಥಿಯಾಗಿರಬಹುದು, ನಿಂತಿರುವ ಅಭ್ಯರ್ಥಿಗೆ ತನ್ನನೇ ಏತಕ್ಕಾಗಿ ಆಯ್ಕೆ ಮಾಡಬೇಕೆಂದು ಹೇಳುವಂಥ ಮತ್ತು ಪ್ರಚಾರ ಮಾಡುವಂಥ ಅವಕಾಶ ಆತನಗೆ ಇರಬೇಕು. ಅದಕ್ಕೆ ಬೇಕಾಗಿರತಕ್ಕಂಥ ಪೂರಕ ವಾತವರಣಗಳು ಇರಬೇಕು. ಇವತ್ತಿನ ದಿವಸ ಮಾನ್ಯ ಹಿರಿಯ ಸದಸ್ಯರುಗಳೆಲ್ಲರೂ ವ್ಯಕ್ತ ಮಾಡಿರತಕ್ಕಂಥದ್ದು ಏನೆಂದರೆ, ವಿಪರೀತವಾಗಿ ಕುಂಭದ್ರೋಣ ರೀತಿಯಾಗಿ ಧಾರಾಕಾರವಾಗಿ ಮಳೆ ಸುರಿಯುತ್ತಿದೆ. ಕೇವಲ ಮಲೆನಾಡಿನ ಪ್ರದೇಶದಲ್ಲಿ ಮಾತ್ರ ಮಳೆ ಸುರಿಯುತ್ತಿಲ್ಲ, ಉತ್ತರ ಭಾಗದ ಒಳನಾಡಿನಲ್ಲಿಯೂ ಕೂಡ ವಿಪರೀತ ಮಳೆಯಾಗಿದೆ. ಬೆಳಗಾಂ ಮತ್ತು ಇತರೆ ಜಿಲ್ಲೆಗಳಲ್ಲಿ ಹೆಚ್ಚು ಮಳೆಯಾಗಿರುವುದರಿಂದ ಗೋಡೆಗಳು ಬಿದ್ದಿವೆ ಮತ್ತೆ ಅನೇಕ ಕಡೆ ಜನರು ಅಸುನೀಗಿರತಕ್ಕಂಥ ಘಟನೆಗಳಾಗಿವೆ ಮತ್ತೆ ಪ್ರವಾಹದಲ್ಲಿ ಕೊಚ್ಚಿ ಹೋಗಿರತಕ್ಕಂಥವುಗಳಿವೆ, ಮತ್ತೆ ಅನೇಕ ನದಿಗಳು, ಕೆರೆಗಳು ತುಂಬಿ ಹರಿಯತಕ್ಕಂಥ ವಾತವರಣ ಇದೆ.

ಶ್ರೀ ಬಿ.ಆರ್.ಪಾಟೀಲ್:– ಅನೇಕ ಕಡೆ ಕಾಲರಾ ಕೂಡ ಬಂದಿದೆ.

ಶ್ರೀ ಎಂ.ಪಿ.ಪ್ರಕಾಶ್:– ಈ ರೀತಿಯಾದಂಥ ವಾತಾವರಣದಲ್ಲಿ ಪ್ರಚಾರ ಮಾಡತಕ್ಕಂಥ ಜನ ಮನೆ ಮನೆಗೆ ತಲುಪ ಬೇಕಾಗಿರತಕ್ಕಂಥ ಅಗತ್ಯತೆ ಇದೆ. ಹವಾಮಾನದ ವರದಿ ಪ್ರಕಾರ ಅವತ್ತಿನ ದಿವಸ ಮಳೆ ಬರುವುದಿಲ್ಲವೆಂದು ಹೇಳಿ ಆ ವರದಿಯ ಮೇಲೆ ನಾವೆಲ್ಲಾ ಆಧಾರಿತವಾಗತಕ್ಕಂಥದ್ದು ಸಹಜ. ಅನೇಕ ಸಂದರ್ಭದಲ್ಲಿ ಹವಾಮಾನ ವರದಿಯ ಪ್ರಕಾರ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ಮಳೆ ಬಹಳ ಕಡಿಮೆ ಇರುತ್ತದೆ. ನಮ್ಮ ಇಲಾಖೆ ಉನ್ನತದ ಮಟ್ಟದ ಅಧಿಕಾರಿಗಳೆಲ್ಲರೂ ಕೂಡ 2ನೇ ತಾರೀಖಿನ ದಿವಸ ಸಭೆಯಲ್ಲಿ ಭಾಗವಹಿಸಿದಾಗ ಈಗಿರತಕ್ಕಂಥ ಮಳೆಯಿಂದ ನೆರೆಯ ವಾತಾವರಣ ಇರುವುದರಿಂದ ತಾವು ದಯವಿಟ್ಟು ಇದನ್ನು ಆಗಸ್ಟ್ ಅಂತ್ಯಕ್ಕೆ ಅಥವಾ ಸೆಪ್ಟೆಂಬರ್ ತಿಂಗಳ ಅಂತ್ಯಕ್ಕೆ ಚುನಾವಣೆಯನ್ನು ಮಾಡಿ ಎನ್ನತಕ್ಕಂಥ ರೀತಿಯಲ್ಲಿ ತಮ್ಮಗಳ ಆಕ್ಷೇಪಣೆಗಳನ್ನು ಮಂಡಿಸಿದ್ದಾರೆ. ಆಗ ಅವರು ಏನು ಹೇಳಿದ್ದಾರೆಂದರೆ ಹವಾಮಾನ ಇಲಾಖೆಯ ವರದಿಯ ಆಧಾರದ ಮೇಲೆ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ಮಳೆ ಕಡಿಮೆ ಬರುತ್ತದೆ. ಈ ಚುನಾವಣೆ ಕೇವಲ ನಗರ

ಪ್ರದೇಶಗಳಿಗೆ ಸೀಮಿತವಾಗಿರುವುದರಿಂದ ನೀವು ನನಗೆ ಸಹಕಾರವನ್ನು ಕೊಡಬೇಕೆಂದು ಕೇಳಿದ್ದಾರೆ. ಆ ಸಭೆಯಲ್ಲಿ ಇಂಥ ದಿವಸವೇ ಚುನಾವಣೆ ಮಾಡುತ್ತೇವೆಂಬ ಮಾತನ್ನು ಅವರು ಹೇಳಿಲ್ಲ. ನಿಮ್ಮ ಸಹಕಾರ ಬೇಕು, ನಾನು ಚುನಾವಣೆಯನ್ನು ನಡೆಸುತ್ತೇನೆಂದು ಹೇಳಿದ್ದಾರೆ. ತತ್‌ಕ್ಷಣದಲ್ಲಿ ಚುನಾವಣೆ ಅಧಿಸೂಚನೆ ಹೊರಬಿದ್ದ ನಂತರ ಮಾಡಬೇಕೆಂದು ಆದೇಶ ಇದೆ. ಎಂದು ಹೇಳಿದ್ದಾರೆ. ನ್ಯಾಯಾಲಯ ಕೊಟ್ಟಿರುವಂಥ ಆದೇಶವನ್ನು ನಾವು ಕಟ್ಟುನಿಟ್ಟಾಗಿ ಪರಿಪಾಲಿಸುವುದಕ್ಕೆ ಈ ಸಮ್ಮಿಶ್ರ ಸರ್ಕಾರ ಬದ್ಧವಾಗಿದೆ. ಅದೇ ರೀತಿಯಾಗಿ ಚರ್ಚೆಯಲ್ಲಿ ಭಾಗವಹಿಸಿರುವ ಎಲ್ಲಾ ಶಾಸಕರು ಕೂಡ ತಮ್ಮಗಳ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಚುನಾವಣೆಯನ್ನು ಎದುರಿಸಲಾರದಂಥ ಪಲಾಯನವಾದಿಗಳು ನಾವ್ಯಾರೂ ಕೂಡ ಅಲ್ಲ. ಮತ್ತೆ ಚುನಾವಣೆಯಲ್ಲಿ ಸೋಲು ಗೆಲುವು ಎನ್ನತಕ್ಕಂಥ ಫಲಿತಾಂಶವನ್ನು ಎಲ್ಲಾ ಪಕ್ಷಗಳು ಮತ್ತು ಚುನಾವಣೆಗೆ ನಿಂತುಕೊಂಡಿರುವ ಅಭ್ಯರ್ಥಿಗಳು ಸ್ವೀಕರಿಸಲೇ ಬೇಕು. ಚುನಾವಣೆಯಲ್ಲಿ ಸೋತಾಗ ನಮ್ಮ ಆತ್ಮಾವಲೋಕನೆಗೆ ಅವಕಾಶ ಮಾಡಿಕೊಡುತ್ತದೆ. ಗೆದ್ದಾಗ ನಮ್ಮ ಕರ್ತವ್ಯಗಳನ್ನು ಅದು ನೆನಪಿಸಿ ಕೊಡುತ್ತದೆ. ಆದ್ದರಿಂದ ಚುನಾವಣೆಯನ್ನು ನಾವು ಮುಂದಕ್ಕೆ ಹಾಕುತ್ತೇವೆಂದರೆ, ವಿನಾಃಕಾರಣ ಕುಂಟು ನೆಪದಿಂದ ಮುಂದಕ್ಕೆ ಹಾಕತಕ್ಕಂಥ ಅಗತ್ಯವಿಲ್ಲ. ಪ್ರಜಾಪ್ರಭುತ್ವವನ್ನು ನಾನು ಒಪ್ಪಿದ್ದೇವೆ. ಮತ್ತೆ ಸಂವಿಧಾನದ ತಿದ್ದುಪಡಿಯನ್ನು ನಾವೇ ಮಾಡಿದ್ದೇವೆ. ಆದ್ದರಿಂದ ಅವಧಿ ಪೂರ್ವವಾಗಿ ಚುನಾವಣೆ ಮಾಡುವುದು ಕೆಲವು ಕಾರಣಕ್ಕಾಗಿ ವಿಳಂಬವಾಗಿದೆ. ಅದಕ್ಕಾಗಿ ನಾವು ಕ್ಷಮೆಯನ್ನು ಸಹ ಕೋರಿದ್ದೇವೆ. ಇದು ಆಗಿರತಕ್ಕಂಥದ್ದರ ನಡುವೆ ಚುನಾವಣೆ ಆಯುಕ್ತರು ಏಕಾಏಕಿ ಇದನ್ನು ನಿರ್ಧಾರ ಮಾಡಿದಂಥ ಸಂದರ್ಭದಲ್ಲಿ 5ನೇ ತಾರೀಖಿನ ದಿವಸ ನಮ್ಮ ಪೊಲೀಸ್ ಮಹಾನಿರ್ದೇಶಕರು ಒಂದು ವರದಿಯನ್ನು ನಮ್ಮ ಗೃಹ ಇಲಾಖೆಯ ಮೂಲಕವಾಗಿ ಆಯುಕ್ತರಿಗೆ ಕಳುಹಿಸಿ ಕೊಟ್ಟಿದ್ದಾರೆ. ಅದನ್ನು ಇವತ್ತಿನ ದಿವಸ 10 ಗಂಟೆಯೊಳಗಾಗಿ ಪ್ರಾಯಶಃ ಅವರು ಈ ರೀತಿ ನಗರ ಪ್ರದೇಶಗಳಿಗೆ ಚುನಾವಣೆ ಮಾಡತಕ್ಕಂಥದ್ದು ಏನಿದೆ, ಅದರಲ್ಲಿ ಈ ಎಲ್ಲಾ ವಿಚಾರಗಳು ಈ ರೀತಿಯಾದಂಥ ಪ್ರವಾಹ ಬಂದಂಥ ಸಂದರ್ಭಗಳಲ್ಲಿ ಕಾಲರಾದಂಥ ರೋಗರುಜಿನಗಳು ಬರತಕ್ಕಂಥಹದ್ದು ಸಹಜ. ಬಡತನದ ಕಾರಣಕ್ಕಾಗಿ ಮತ್ತು

ನಾವು ನೈರ್ಮಲ್ಯದ ವಿಚಾರದಲ್ಲಿ ಸಂಪೂರ್ಣವಾಗಿ ಹೊಣೆಗೇಡಿಗಳು ಆಗಿರುವಂತದ್ದರಲ್ಲಿ ನಗರ ಪ್ರದೇಶದಲ್ಲಿರುವಂತಹ ಪೌರ ಕಾರ್ಮಿಕರು ಅನೇಕ ಸತ್ಯಾಗ್ರಹಗಳನ್ನು ಮಾಡಿರುವಂತಹ ಹಿನ್ನೆಲೆಯಲ್ಲಿ ಕಸದ ರಾಶಿಗಳೇ ಬಿದ್ದಿರುವಂಥಹ ಹಿನ್ನೆಲೆಯಲ್ಲಿ ಬಹಳ ಕಡೆಗಳಲ್ಲಿ ಇಂತಹ ಸಾಂಕ್ರಾಮಿಕವಾದಂಥ ರೋಗಗಳು ಬಂದಿರುವಂತಹ ಹಿನ್ನೆಲೆಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡುವುದರ ಜೊತೆಗೆ ಒಂದು ಹೊಸ ವಿಷಯವೆಂದರೆ 29–8–2007 ರಂದು ಮುಸ್ಲಿಂ ಬಾಂಧವರು ಶಬ್–ಎ–ಬಾರಾತ್ ಎನ್ನುವ ಒಂದು ದೊಡ್ಡ ಪವಿತ್ರವಾಗಿರತಕ್ಕ ಹಬ್ಬವನ್ನು ಅವರು ಆಚರಣೆ ಮಾಡುತ್ತಾರೆ. ಆ ಹಬ್ಬದ ಇಡೀ ರಾತ್ರಿ ಎಲ್ಲಾ ಅವರು ಪ್ರಾರ್ಥನೆ ಮಾಡಬೇಕು. ಅದು 29ನೇ ತಾರೀಖು ನಡೆಯುತ್ತದೆ. ಇವತ್ತಿನ ಪರಿಸ್ಥಿತಿಯಲ್ಲಿ ಎಲ್ಲೋ ಒಂದು ಕಡೆಗೆ ಕೆಲವೊಂದು ಸಮಾಜ ಬಾಹಿರ ಕಿಡಿಗೇಡಿ ವ್ಯಕ್ತಿಗಳು ಈ ದೇಶದ ಶಾಂತಿ ಸುವ್ಯವಸ್ಥೆಯನ್ನು ಕದಡಬೇಕು ಎನ್ನುವ ಕಾರಣಕ್ಕಾಗಿ ಅನುಚಿತವಾದಂಥ ಘಟನೆಗಳು ಆಗುವಂಥ ಸಂಭವಗಳು ಇರುವುದರಿಂದ ನಾವು ಪೊಲೀಸ್ ಬಂದೋಬಸ್ತನ್ನು ನಗರ ಪ್ರದೇಶದಲ್ಲಿಯೇ ಮುಸ್ಲಿಂ ಬಾಂಧವರು ಹೆಚ್ಚು ಇರುವುದರಿಂದ ಅಲ್ಲಿರತಕ್ಕಂಥ ಮಸೀದಿಗಳಲ್ಲಿ ಅವರು ಇಡೀ ರಾತ್ರಿ ಪ್ರಾರ್ಥನೆ ಮಾಡಬೇಕಾದಾಗ ಆ ರಕ್ಷಣೆ ಕೊಡಬೇಕಾಂಥದ್ದು ಇದೆ. 30ನೇ ತಾರೀಖಿಗೆ ಚುನಾವಣೆ ಇದೆ. ಈ ಚುನಾವಣೆ ಮಾಡಬೇಕಾದರೆ 28ನೇ ತಾರೀಖಿನ ದಿವಸವೇ ನಮ್ಮ ಇಡೀ ಪೊಲೀಸ್ ಸಿಬ್ಬಂದಿಯನ್ನು ರಕ್ಷಣಾತ್ಮಕ ಕ್ರಮಗಳಿಗಾಗಿ ಮತ್ತು ಆ ವಾರ್ಡ್‌ಗಳಿಗಾಗಿ ಅವರು ಬೇರೆ ಬೇರೆ ಪ್ರದೇಶಗಳಲ್ಲಿ ಹೋಗಬೇಕಾಗುತ್ತದೆ. ಆ ಸಂದರ್ಭದಲ್ಲಿ ನಮ್ಮ ಮೇಲೆ ಈ ಒಂದು ಗುರುತರವಾಗಿರತಕ್ಕಂಥ ಜವಾಬ್ದಾರಿ ಕೂಡ ಇರುವುದರಿಂದ ದಯವಿಟ್ಟು ಇದನ್ನು ಪುನರ್ ವಿಮರ್ಶೆ ಮಾಡಬೇಕು ಎನ್ನುವಂಥ ಪತ್ರವನ್ನು ಕೂಡ ನಾವು ಅವರಿಗೆ ಕಳುಹಿಸಿಕೊಟ್ಟಿದ್ದೇವೆ. ಚುನಾವಣೆ ವಿಚಾರದಲ್ಲಿ ನಾವು ಪ್ರತಿಷ್ಠೆ ಏನು ಮಾಡಿಲ್ಲ ನಾನು ಈಗಾಗಲೇ ವ್ಯಕ್ತ ಮಾಡಿರುವಂತೆ ಅನಿವಾರ್ಯವಾದ ಸ್ಥಿತಿಯಾದಂಥ ಸಂದರ್ಭದಲ್ಲಿ ನಾವು ಚುನಾವಣೆಯನ್ನು ಮಾಡಲೇ ಬೇಕಾಗುತ್ತದೆ. ಆದರೆ ಇಂತಹ ಒಂದು ನೈಜ ಪರಿಸ್ಥಿತಿಯ ಹಿನ್ನಲೆಯಲ್ಲಿ ನಮ್ಮ ಇಡೀ ಸದನದ ಅಭಿಪ್ರಾಯವನ್ನು ಪ್ರಾಯಶಃ ಚುನಾವಣಾ ಆಯುಕ್ತರು ಗಣನೆಗೆ ತೆಗೆದುಕೊಂಡು ಇದು ಒಂದು ಅಸಮಾನ್ಯವಾದ ಸ್ಥಿತಿ

ಸೃಷ್ಟಿಯಾಗಿರುವುದರಿಂದ ಪುನರ್ ವಿಮರ್ಶೆ ಮಾಡಿಕೊಂಡು ಆ ದಿನಾಂಕವನ್ನು September ಕೊನೆಗೆ ಇಡುವುದು ಆಗಿದ್ದರೆ, 2 ತಿಂಗಳು ಎಂದು ಮಾನ್ಯ ಶ್ರೀರಾಮರೆಡ್ಡಿಯವರು ಕೂಡ ಹೇಳಿದರು. September ಕೊನೆಯಲ್ಲಿ ಇಟ್ಟುಕೊಳ್ಳಬೇಕು ಏಕೆಂದರೆ ಮಧ್ಯದಲ್ಲಿ ಆದರೆ ಗಣೇಶ ಚತುರ್ಥಿ ಬರುತ್ತದೆ. ಗಣೇಶ ಚತುರ್ಥಿ ಕಾಲದಲ್ಲಿ ಅನೇಕ ಸೂಕ್ಷ್ಮ ಪ್ರದೇಶಗಳನ್ನು ನಾವು ಈಗಾಗಲೇ ಘೋಷಣೆ ಮಾಡಿದ್ದೇವೆ ಮತ್ತು ಗುರುತಿಸಿದ್ದೇವೆ. ಅಲ್ಲಿ ಕೋಮು ಗಲಭೆಗಳು ಆಗುವಂಥ ಎಲ್ಲಾ ಸಂಭವಗಳು ಇರುವಂಥ ಹಿನ್ನೆಲೆಯಲ್ಲಿ September ಕೊನೆಯಲ್ಲಿ ಆಗುವುದಾಗಿದ್ದರೆ ಅದು ಒಂದು ಸೂಕ್ತವಾದ ಕಾಲ. ಕೇವಲ ಒಂದು ತಿಂಗಳು ಎರಡು ತಿಂಗಳು ಮುಂದೆ ಹಾಕುವುದರ ಮೂಲಕವಾಗಿ ನ್ಯಾಯಾಲಯಗಳು ಕೂಡ ವಸ್ತುಸ್ಥಿತಿಯನ್ನು ಸರಿಯಾಗಿ ಅವರಿಗೆ ವಿವರಿಸಿದರೆ ಅವರು ಕೂಡ ಒಪ್ಪುತ್ತಾರೆ. ಚುನಾವಣಾ ಆಯುಕ್ತರಿಗೆ ಈ ಅಧಿಕಾರವನ್ನು ನಾವು ಕೊಟ್ಟಿದ್ದೆವೆ. ಆ ಅಧಿಕಾರವನ್ನು ಬಳಸಿ ಅವರು ಮತ್ತೆ ಪುನರ್ ವಿಮರ್ಶೆ ಮಾಡಿ ನಿರ್ಧರವನ್ನು ಮಾಡಬೇಕು. ಜನ ಪ್ರತಿನಧಿಗಳ ಅಭಿಪ್ರಾಯದ ಮುಂದೆ ಬರೀ ತಾಂತ್ರಿಕವಾಗಿರತಕ್ಕಂಥ ನಿಯಮಾವಳಿಗಳನ್ನು ಉದಾರಿಸುವಂಥದ್ದು ಅಷ್ಟು ಆರೋಗ್ಯಕರವಾದ ಬೆಳವಣಿಗೆಯಲ್ಲ ಎನ್ನುವಂಥ ಮಾತನ್ನು ಹೇಳಿ ಈ ಸಂದರ್ಭದಲ್ಲಿ ಚುನಾವಣಾ ಆಯುಕ್ತರಿಗೆ ಸಹಕಾರ ಕೊಡಲಿಕ್ಕೆ ಸರ್ಕಾರ ಸಿದ್ಧವಿದೆ. ಆದರೆ ಅಷ್ಟರ ಮಟ್ಟಿಗೆ ಚುನಾವಣಾ ಆಯುಕ್ತರು ಇಡೀ ಸದನದ ಅಭಿಪ್ರಾಯವನ್ನು ಪಕ್ಷಾತೀತವಾಗಿ ಮತ್ತು ಇಲ್ಲಿರುವಂಥ ವಸ್ತುಸ್ಥಿತಿಯನ್ನು ಬೇರೆ ಬೇರೆ ಪಕ್ಷಗಳು ಅಲ್ಲದೇ ಸಮಾಜದಲ್ಲಿರತಕ್ಕಂಥ ಪತ್ರಿಕೆಗಳು ಮತ್ತು ಸಂಘ ಸಂಸ್ಥೆಗಳು ಕೊಟ್ಟಿರತಕ್ಕಂಥ ಮನವಿಯ ಹಿನ್ನೆಲೆಯಲ್ಲಿ ಅದನ್ನು ಪುನರ್ ವಿಮರ್ಶೆ ಮಾಡಬೇಕೆಂದು ಹೇಳಿ ನಾನು ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತೇನೆ. ಇದನ್ನು ನಾವು ಅವರ ಗಮನಕ್ಕೆ ಕೂಡ ತರುತ್ತೇವೆ.

(2) ವಿಷಯ: ಮಲೆನಾಡಿನ ಭಾಗದಲ್ಲಿ ಅತಿವೃಷ್ಟಿ ಬಗ್ಗೆ.

ಶ್ರೀ ಕುಮಾರಸ್ವಾಮಿ ಎಂ.ಪಿ (ಮೂಡಗೆರೆ): ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಲೆನಾಡಿನ ಭಾಗದಲ್ಲಿ ಅತಿಯಾದ ಮಳೆಯಿಂದ ಎರಡನೇ